

ನಿರಭ

2023

ಜ್ಞಾನಭಾರತಿ, ಮಾನಸಗಂಗೋತ್ರಿ, ಸಿರಿಗಾನಲ್ಲೂರು ಪುಟ್ಟಸ್ವಾಮಯ್ಯ ಪರ್ಯಾಯ ಪಾರಿತೋಷಕ

ರಾಜ್ಯಮಟ್ಟದ ಅಂತರ ಕಾರೇಜು ರಂಗ ಸ್ಪರ್ಧೆ – 2023

STATE LEVEL INTER COLLEGE THEATRE COMPETITION



ಪರಿವಿಡಿ

ಸೌರಭ – 23 ಪರಿಚಯ ____ 01

ಸೌರಭ – 23ರ ಅನಿಸಿಕೆ ____ 02

ಭಾರತ ಯಾತ್ರಾ ಕೇಂದ್ರ ಪರಿಚಯ ____ 04

ರಂಗ ಸೌರಭ ಪರಿಚಯ ____ 06

ತಂಡಗಳು ____ 07

ಉದ್ಘಾಟನಾ ಸಮಾರಂಭ ____ 08

ಜಾನಪದ ವೃಂದಗಾಯನ ____ 09

ನಾಟಕಗಳು ____ 10

ಜಾನಪದ ನೃತ್ಯ ____ 28

ಸಂಸ ಪ್ರಶಸ್ತಿ 2023 ____ 29

ರಂಗ ರಸಪ್ರಶ್ನಾವಳಿ ____ 30

ಶಾಸ್ತ್ರೀಯ ನೃತ್ಯ ____ 31

ಆರ್. ಎ. ಪ್ರಭಾಕರ ಪ್ರಶಸ್ತಿ ____ 32

ಪ್ರಶಸ್ತಿ ಪ್ರದಾನ ಸಮಾರಂಭ ____ 33

ನಾಟಕ ಪಾರಿತೋಷಕ ____ 39

ಪದ್ಮಭೂಷಣ ಡಾ. ಹೆಚ್. ನರಸಿಂಹಯ್ಯ ಪಾರಿತೋಷಕ ____ 40

ಉಮೇಶ್ ರುದ್ರ ಸರ್ವೋತ್ತಮ ಪಾರಿತೋಷಕ ____ 41

ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ ____ 42

ನಾಟಕದ ತೀರ್ಪುಗಾರರ ಅನಿಸಿಕೆ ____ 43

ಸಾಂಸ್ಕೃತಿಕ ಸ್ಪರ್ಧೆಯ ವಿಜೇತರು ____ 49

ನಾಟಕದ ಅತ್ಯುತ್ತಮ ಪ್ರಶಸ್ತಿ ವಿಜೇತರು ____ 50

ನಾಟಕದ ಪಾರಿತೋಷಕ ವಿಜೇತರು ____ 51



ಸೌರಭ 2023

ABOUT THE FESTIVAL

'ಸೌರಭ' ರಾಜ್ಯಮಟ್ಟದ ಅಂತರಕಾಲೇಜು ರಂಗಸ್ಪರ್ಧೆ. ಇದು ರಂಗಸೌರಭ ಮತ್ತು ಭಾರತ ಯಾತ್ರಾ ಕೇಂದ್ರ ತಂಡಗಳ ಕನಸು. 24 ವರ್ಷಗಳ ಹಿಂದೆ ಕಾಲೇಜಿನ ರಂಗ ತಂಡವಾಗಿ ಜನ್ಮ ತಳೆದ ರಂಗಸೌರಭ ಇಂದು ವೃತ್ತಿಪರ ತಂಡವಾಗಿ ರೂಪುಗೊಂಡು ರಂಗಭೂಮಿಗೆ ಅನುಪಮ ಸೇವೆ ಸಲ್ಲಿಸುತ್ತಿದೆ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಅನ್ನುವಂತೆ, ಜೀವನದ ಮೌಲ್ಯಗಳನ್ನು ತುಂಬಿಕೊಟ್ಟ ಕಾಲೇಜು ರಂಗಭೂಮಿಗೆ ಮರಳಿ ಕೊಡುವ ಉದಾತ್ತ ಯೋಚನೆಯ ಸಾಕಾರವೇ 'ಸೌರಭ'. ರಂಗಸೌರಭದ ಸಂಕಲ್ಪಕ್ಕೆ ಬೆನ್ನೆಲುಬಾಗಿ ನಿಂತಿದ್ದು, ಭಾರತ ಯಾತ್ರಾ ಕೇಂದ್ರ ಮತ್ತದರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ನಾಗರಾಜಮೂರ್ತಿ. ಸಂಕಲ್ಪ ಮತ್ತು ಇಚ್ಛಾಶಕ್ತಿಯ ಸಮ್ಮಿಳಿತದ ಶಕ್ತಿಗೆ 'ಸೌರಭ ರಾಜ್ಯಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆ'ಯ ಎರಡು ಆವೃತ್ತಿಗಳು ಸಾಕ್ಷಿಯಾಗಿದ್ದು ಈಗ ಇತಿಹಾಸ.

'ಹೀಗೆ ಮಾಡಬಹುದು, ಹೀಗೆ ಆಗಬಹುದು' ಅಂತಾ ಸಾಕಷ್ಟು 'ಬಹುದು'ಗಳೊಂದಿಗೆ ಸೌರಭದ ಪರಿಕಲ್ಪನೆ ಆರಂಭವಾಯ್ತು. ನಿಖರವಾದ ಯೋಜನೆಗಳನ್ನು ಹೊರತು ಪಡಿಸಿದರೆ, ರಾಜ್ಯಮಟ್ಟದ ರಂಗಸ್ಪರ್ಧೆಯನ್ನು ನಡೆಸಿದ ಯಾವುದೇ ಅನುಭವಗಳು ರಂಗಸೌರಭದ ಬೆನ್ನಿಗಿರಲಿಲ್ಲ. ಹೊಸ ದಾರಿ, ಹೊಸ ಸವಾಲು, ಹೊಸ ಅನುಭವಗಳನ್ನು ಎದುರು ನೋಡುತ್ತಾ, ನಾಗರಾಜಮೂರ್ತಿ ಅವರ ಮಾರ್ಗದರ್ಶನದಲ್ಲಿ ಮುನ್ನಡೆದೆವು.

ಸೌರಭ ಮೊದಲ ಆವೃತ್ತಿಯಲ್ಲಿ ಕಾಲೇಜುಗಳಿಗೆ ಎಡತಾಕಿ ಸ್ಪರ್ಧೆಗೆ ಅವರನ್ನು ಆಮಂತ್ರಿಸಿ, ಒತ್ತಾಯಿಸಿ, ರಂಗತಂಡವನ್ನು ಕಳುಹಿಸಲು ಒಪ್ಪಿಸುವಷ್ಟರಲ್ಲಿ ಸಾಕು ಬೇಕಾಗಿತ್ತು. ಆದರೆ ಸೌರಭ–20 ರ ಯಶಸ್ಸು ಎಲ್ಲರ ಹುಬ್ಬೇರುವಂತೆ ಮಾಡಿತ್ತು. ಇದರ ಯಶಸ್ಸು ಸೌರಭ– 23ಕ್ಕೆ ಮುನ್ನುಡಿಯಾಗಿತ್ತು. ಈ ಬಾರಿ ಕಾಲೇಜುಗಳು ಸ್ವಯಂ ಪ್ರೇರಿತವಾಗಿ ನೋಂದಾಯಿಸಿಕೊಂಡು ಕಾಲೇಜು ರಂಗಭೂಮಿಗೆ ಹೊಸ ಹೊಳಪನ್ನು ತಂದುಕೊಟ್ಟಿತು. ಸಕ್ರಿಯ ಭಾಗವಹಿಸುವಿಕೆ ಹಾಗೂ ಗುಣಮಟ್ಟದ ಸ್ಪರ್ಧಾಳುಗಳಿಂದ ನಿರೀಕ್ಷೆಯಂತೆ 'ಸೌರಭ–23' ಯಶೋದುಂದುಭಿಯನ್ನು ಭಾರಿಸಿತು. ಈ ಬಾರಿಯೂ ಅನುಕ್ರಮ ಕ್ಷೇತ್ರದ ಪರಿಣಿತರನ್ನು ಆಂಮತ್ರಿಸಿ, ಪ್ರಬುದ್ಧ ತೀರ್ಪುಗಾರ ಮಂಡಳಿ ರಚಿಸುವ ಮೂಲಕ ಸ್ಪರ್ಧೆಗಳ ಗುಣಮಟ್ಟದ ಶ್ರೇಷ್ಠತೆಯನ್ನು ಕಾಪಿಡಲಾಗಿತ್ತು.

ಫೆಬ್ರವರಿ 1 ರಂದು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ಸಂಸ ಬಯಲು ರಂಗಮಂದಿರದಲ್ಲಿ ಉದ್ಘಾಟನೆಗೊಂಡ ಕಾರ್ಯಕ್ರಮದಲ್ಲಿ ಹಿರಿಯ ನಟರಾದ ಅಶೋಕ್, ಅಚ್ಯುತ್ ಕುಮಾರ್, ಶಿಕ್ಷಣ ತಜ್ಞ ಡಿ.ಎನ್. ವೆಂಕಟರಾವ್ ಖ್ಯಾತ ಕುಚಿಪುಡಿ ಕಲಾವಿದೆ ಶ್ರೀಮತಿ ವೈ ಜಯಂತಿ ಕಾಶಿ ಹಾಗೂ ಬಿ. ಸುರೇಶ್ ಉಪಸ್ಥಿತರಿದ್ದರು.

ಹನ್ನೊಂದು ದಿನಗಳ ಈ ರಂಗಪರ್ವ ಫೆಬ್ರವರಿ 11 ರಂದು ಸಮಾರೋಪಗೊಂಡಿತು. ಸಂಸ ರಂಗಮಂದಿರದಲ್ಲಿಯೇ ಬಹುಮಾನ ವಿತರಣಾ ಕಾರ್ಯಕ್ರಮಕ್ಕೆ ರಿಷಬ್ ಶೆಟ್ಟಿ, ಸಪ್ತಮಿ ಗೌಡ, ಅಭಿಷೆಕ್ ಅಂಬರೀಷ್, ಶ್ವೇತಾ ಶ್ರೀವಾತ್ಸವ್ ಸೇರಿದಂತೆ ಚಲನಚಿತ್ರ ಹಾಗೂ ನಾಟಕ ಕ್ಷೇತ್ರದದ ದಿಗ್ಗಜರನ್ನು ಆಹ್ವಾನಿಸಲಾಗಿತ್ತು.

"Sourabha'' is a state level inter-college competition. This is the dream child of Ranga Sourabha and Bharata Yatra Kendra. Born 24 years ago, as a college theater troupe, Ranga Sourabha has now become a professional troupe and is rendering unparalleled service to theatre. 'Sourabha' is the embodiment of the noble idea of giving back to the college theater that instilled the values of life, similar to 'pour the water of the lake back into the lake'.

When the idea of Sourabha first emerged, it was rife with a plethora of "cans", such as "this can be done" and "this can happen". Besides complex planning, Ranga Sourabha had no prior experience running state-level stage competitions.This situation was turned around by Bharata Yatra Kendra's General Secretary, Sri Nagarajamurty.
Subsequently, he serves as the lynchpin of Ranga Sourabha's dedication. Sourabha has had considerable success under his guidance and supervision: Two editions of "Sourabha: State Level Inter-College Competition" has already been completed, illustrating the power of the amalgamation of tenacity and resolve.

In the first year of Sourabha, the need to invite colleges, insist them on attending, and persuading them to send a team was on the surface. As a result of Sourabha-20's accomplishment, everyone became excited and this achievement served as a lead-up to Sourabha-23. This time, colleges registered freely, giving college theater a fresh coat of paint. ''Sourabha-23'' became a huge success, from enthusiastic participation and good competitors.

This time as well, the competitions' high standards were upheld by assembling an esteemed jury and inviting specialists in the relevant subjects.
In attendance were seasoned actors Ashok and Achyut Kumar, educator D.N. Venkatarao, well-known Kuchipudi performer Mrs. Vyjayanthi Kashi, and B. Suresh.
On February 11, the eleven-day grand event came to an end.
Celebrities from the worlds of film and theatre, including Rishabh Shetty, Sapthami Gowda, Abhishek Ambareesh, and Shweta Srivatsav, were invited to Samsa Theatre's prize distribution session.



ಸೌರಭ 2023 – ಅನಿಸಿಕೆ

ABOUT THE FESTIVAL BY MANDYARAMESH

ರಮೇಶನಾಗಿದ್ದ ನನ್ನನ್ನು ಇಂದು ಜಗತ್ತು ಮಂಡ್ಯ ರಮೇಶ ಅಂತ ಗುರುತಿಸುತ್ತಿದೆ. ನನಗೆ ನನ್ನದೇ ಆದ ಅಸ್ಮಿತೆಯನ್ನು ತಂದುಕೊಟ್ಟಿದೆ ಅಂದ್ರೆ ಅದು ನನ್ನ ನಟನಾ ಕಲೆ. ರಂಗಭೂಮಿಯ ಮೂಲಕ ಬದುಕುವ ಕಲೆ ಕಲಿತ ನಾನು, ರಂಗಭೂಮಿಯನ್ನು ಅಭ್ಯಾಸಿಸುತ್ತಾ, ಅದನ್ನೇ ಉಸಿರಾಗಿಸಿಕೊಂಡಿದ್ದೇನೆ. ಸಿನಿಮಾ, ಧಾರಾವಾಹಿಗಳಲ್ಲಿ ನನ್ನ ನಟನೆ ರಂಗಭೂಮಿಯಲ್ಲಿ ನಾನು ಕಲಿತ ಕಲೆಯ ಬೈ ಪ್ರಾಡಕ್ಟ್.

ಕಲೆ ಅನ್ನೋದು ಎಲ್ಲರನ್ನು ಕೈಬೀಸಿ ಕರೆಯುತ್ತೆ. ಆದ್ರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ. ಈ ಮಾತು ಕಲಾ ಪ್ರಪಂಚದಲ್ಲಿ ಬಹಳ ಪ್ರಚಲಿತದಲ್ಲಿದೆ. ಆದ್ರೆ ಮುಂದುವರೆದು ಹೇಳೋದಾದ್ರೆ, ಕಲೆ ಕೆಲವರನ್ನು ಮಾತ್ರ ಆರಿಸಿಕೊಂಡರೂ, ಯಾರನ್ನೂ ಬರಿಗೈನಲ್ಲಿ ಮಾತ್ರ ಹಿಂದಕ್ಕೆ ಕಳುಹಿಸಿಲ್ಲ. ಮನುಷ್ಯನಿಗೆ ಕಲೆ, ರಂಗಭೂಮಿ ರೀತಿಯ ಮಾಧ್ಯಮಗಳು ಆತ್ಮವಿಶ್ವಾಸವನ್ನು ತುಂಬುತ್ತದೆ. ಜೀವನಶೈಲಿ ಹೇಳಿಕೊಡುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ನಾಲ್ಕಾರು ಜನರ ಮುಂದೆ ನಿಂತು ಧೈರ್ಯವನ್ನು ತಮ್ಮ ಅನಿಸಿಕೆಯನ್ನು ಹೇಳುವುದನ್ನು ಕಲಿಸಿಕೊಡುತ್ತದೆ. ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ರಂಗ ಶಿಕ್ಷಣ ಚಿಕ್ಕಂದಿನಿಂದಲೇ ನೀಡಬೇಕು ಅನ್ನುವುದು ನನ್ನ ಅಭಿಮತ.

ರಂಗಭೂಮಿ ಅನ್ನುವುದು ಒಂದು ಪ್ರಕ್ರಿಯೆ. ಹೊಸತು ಪ್ರವಹಿಸುತ್ತಿದ್ದರಷ್ಟೇ ರಂಗಭೂಮಿಯ ಸ್ವಾಸ್ಥ್ಯ ಕಾಪಾಡಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಂಗಭೂಮಿಯತ್ತ ಹೊಸ ರಕ್ತ, ನವ ಚೈತನ್ಯ ತುಂಬಿದ ಯುವ ಸಮುದಾಯವನನ್ನು ಸೆಳೆಯುವುದು ಸದ್ಯದ ಅಗತ್ಯವಾಗಿದೆ. ಇಂಥದ್ದೇ ಒಂದು ಚಿಂತನೆ ಹಾಗೂ ದೂರದೃಷ್ಟಿಯನ್ನು ಹೊಂದಿದ್ದ ಕಾರ್ಯಕ್ರಮದ ಭಾಗವಾಗುವ ಅದೃಷ್ಟವೊಂದು ನನಗಾಗಿ ಒಲಿದು ಬಂದಿತ್ತು.

ಬೆಂಗಳೂರಿನ ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯವಾಗಿರುವ ರಂಗಸೌರಭ ಹಾಗೂ ಸಂಘಟನೆಯಲ್ಲಿ ನಿಷ್ಣಾತರಾಗಿರುವ ಭಾರತ ಯಾತ್ರಾ ಕೇಂದ್ರದ ಗೆಳೆಯರು ಇತ್ತೀಚಗಷ್ಟೇ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸೌರಭ 23 ಹೆಸರಿನಲ್ಲಿ ರಾಜ್ಯಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆಗಳನ್ನು ಆಯೋಜಿಸಿದ್ದರು. ಈ ರಂಗಸ್ಪರ್ಧೆಗೆ ರಾಜ್ಯದ ಮೂಲೆ ಮೂಲೆಯಿಂದಲೂ ವಿವಿಧ ಕಾಲೇಜುಗಳೂ, ಕುಣಿಗಲ್ ಹಾಗೂ ಬೆಂಗಳೂರಿನ ವಿವಿಧ ಬಡಾವಣೆಯ ಸರ್ಕಾರಿ ಕಾಲೇಜುಗಳು ಆಗಮಿಸಿದ್ದಲ್ಲದೇ ಸಕ್ರಿಯವಾಗಿ ಪಾಲ್ಗೊಂಡಿದ್ದು ನನ್ನ ಹುಬ್ಬೇರುವಂತೆ ಮಾಡಿತ್ತು.

ರಂಗಭೂಮಿಯತ್ತ ಯುವಕರು ಹೆಚ್ಚು ಹೆಚ್ಚಾಗಿ ಬಂದರಷ್ಟೇ ರಂಗಭೂಮಿಯ ಉಳಿವು ಸಾಧ್ಯ ಅನ್ನುವ ಚಿಂತನೆಯುಳ್ಳ ನಾನು, ಅದೇ ದೃಷ್ಟಿಯಿಂದ ಗೆಳೆಯ ಹಾಗೂ ಅದ್ಭುತ ನಟ ವಲ್ಲಭ ಸೂರಿ ನೀಡಿದ ನಿಮಂತ್ರಣಕ್ಕೆ ಓಗೊಟ್ಟು ಕಾರ್ಯಕ್ರಮಕ್ಕೆ ತೆರಳಿದ್ದೆ.

ಪಶ್ಚಿಮ ದಿಗಂತದಲ್ಲಿ ಸೂರ್ಯ ಆಗಷ್ಟೇ ತನ್ನ ಡ್ಯೂಟಿ ಮುಗಿಸಿ ಮನೆಯತ್ತ ಹೊರಟಿದ್ದ. ಮಬ್ಬುಗತ್ತಲಿನಲ್ಲಿ ತಂತ್ರಜ್ಞರು ಬೆಳಕು ವಿನ್ಯಾಸವನ್ನು ಪರಿಶೀಲಿಸುತ್ತಿದ್ದರು. ಅದಕ್ಕೆ ತಕ್ಕುದಾದ ಸಂಗೀತ ಸ್ವೀಕರ್ನಿಂದ ಹೊರ ಹೊಮ್ಮುತ್ತಿತ್ತು. ಸೂರ್ಯನ ಶಾಖಕ್ಕೆ ಬಸವಳಿದಿದ್ದ ಕಲ್ಲು ಬೆಂಚಿನ ಮೇಲೆ ವಿದ್ಯಾರ್ಥಿಗಳು, ಕ್ಷಮಿಸಿ, ಅವನ್ನು ವಿದ್ಯಾರ್ಥಿ ಅನ್ನುವುದಕ್ಕಿಂತ ರಂಗಾರ್ಥಿ ಅಂತ ಕರೆಯುವುದೇ ಸೂಕ್ತ. ಹಾ..! ಕಲ್ಲು ಬೆಂಚಿನ ಮೇಲೆ ರಂಗಾರ್ಥಿಗಳು ಒಬ್ಬೊಬ್ಬರಾಗಿ ಆಸೀನರಾಗುತ್ತಿದ್ದರು. ಕಲ್ಲು ಸಕ್ಕರೆಗೆ ಮುತ್ತುವ ಇರುವೆಗಳಂತೆ, ಸಂಸ ಬಯಲು ರಂಗಮಂದಿರ ರಂಗಾರ್ಥಿಗಳಿಂದಲೇ ತುಂಬಿ ಹೋಯ್ತು. ಗಾಳಿಗೂ ಕೂಡ ಸುಳಿಯಲು ಜಾಗವಿಲ್ಲ ಅನ್ನುವಷ್ಟರ ಮಟ್ಟಿಗೆ ರಂಗಾರ್ಥಿಗಳು ಕಿಕ್ಕಿರಿದು ತುಂಬಿದ್ದರು.

ಈ ದೃಶ್ಯವನ್ನು ಕಣ್ತುಂಬಿಕೊಂಡ ನನ್ನ ಮನದಲ್ಲಿ ಸಾರ್ಥಕ ಭಾವ ಮೂಡಿತ್ತು. ರಂಗಭೂಮಿಯತ್ತ ಯುವ ಪ್ರವಾಹ ಹರಿದು ಬರುತ್ತಿರುವುದ ಕಂಡು ಮನಸ್ಸು ಪ್ರಫುಲ್ಲಿತವಾಯಿತು. ಇಂಥ ಅತ್ಯದ್ಭುತ ಪ್ರಯತ್ನವನ್ನು ಸದ್ದಿಲ್ಲದೇ ಮಾಡುತ್ತಿರುವ ನನ್ನ ಈ ರಂಗ ಗೆಳೆಯರ ಬಗ್ಗೆ ಏನೆಂದು ಹೇಳುವುದು ಅನ್ನುವುದೇ ತೋಚದಾಯ್ತು. ಇದಕ್ಕೆಲ್ಲಾ ಕಳಶವಿಟ್ಟಂತೆ, ಕಾರ್ಯಕ್ರಮ ಕೇವಲ ರಂಗಭೂಮಿಯ ಸ್ಪರ್ಧೆಗಳಿಗೆ ಮಾತ್ರ ಮೀಸಲಾಗಿರಲಿಲ್ಲ. ಜಾನಪದ ಕಲಾ ಪ್ರಕಾರಗಳನ್ನು ಪರಿಚಯಿಸುವ ಬಗ್ಗೆಯೂ ಅತೀವ ಕಾಳಜಿವಹಿಸಲಾಗಿತ್ತು. ಜಾನಪದ ನೃತ್ಯ ಹಾಗೂ ಗಾಯನ ವಿಭಾಗಗಳಿಗೂ ಸಹ ಸ್ಪರ್ಧೆ ಆಯೋಜಿಸಿದ್ದು, ಜಾನಪದ ರಂಗಕ್ಕೆ ಟಾನಿಕ್ ನಂತೆ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಸೌರಭ ಅನ್ನೋದು ಕೇವಲ ಸ್ಪರ್ಧೆ ಮಾತ್ರವಲ್ಲ. ಇದು ಒಂದು ಜೀವಂತಿಕೆ. ಯುವ ರಂಗ ಒಲವಿನ ಸಂಭ್ರಮ. ಈ ಪ್ರಯತ್ನದಿಂದ ಕನ್ನಡ ರಂಗಭೂಮಿ ಅದರಲ್ಲಿಯೂ ಹವ್ಯಾಸಿ ರಂಗಭೂಮಿ ಮತ್ತಷ್ಟು ಶ್ರೀಮಂತಗೊಳ್ಳುತ್ತದೆ. ನವೋತ್ಸಾಹದ ಚಿಲುಮೆಯಿಂದ ಮತ್ತಷ್ಟು ಎತ್ತರಕ್ಕೆ ಪುಟಿದು ನಿಲ್ಲುತ್ತದೆ. ಒಂದು ಪರಿಪೂರ್ಣವಾದ ಹಾಗೂ ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ಸೌರಭ ತಳಪಾಯ ಹಾಕುತ್ತದೆ ಅನ್ನುವುದ ನನ್ನ ದೃಢ ನಂಬುಗೆ. ಸೌರಭ 23 ರಾಜ್ಯ ಮಟ್ಟದ ಅಂತರ ಕಾಲೇಜು ರಂಗ ಸ್ಪರ್ಧೆ. ಹೀಗೆ ಅವಿರತವಾಗಿ ಮುಂದುವರೆಯುತ್ತಿರಲಿ. ಸೌರಭ 23.. 50 ಆಗಲಿ... 100 ಆಗಲಿ ಅನ್ನೋದೆ ನನ್ನ ಆಶಯ.

– ಮಂಡ್ಯ ರಮೇಶ್
ಸಂಸ್ಥಾಪಕರು, ನಟನಾ ಮೈಸೂರು









ಅಂತರ ಕಾಲೇಜು
ರಂಗ ಸ್ಪರ್ಧೆಗಳು-93








* ರಂಗ ಭಾರತಿ
* ಕರ್ನಾಟಕ ನಾಟಕ ಅಕಾಡೆಮಿ
* ಕಸ್ತೂರಿ ಸಂಸ್ಕೃತಿ ಪ್ರಾಯೋ
ಜ್ಞಾನ ಭಾರತಿ
ಅಂತರ ಕಾಲೇಜು
ನಾಟಕ ಸ್ಪರ್ಧೆ




ಭಾರತ ಯಾತ್ರಾ ಕೇಂದ್ರ

BHARATHA YATRA KENDRA

ಭಾರತ ಯಾತ್ರಾ ಕೇಂದ್ರವನ್ನು ಭಾರತದ ಮಾಜಿ ಪ್ರಧಾನಿ ಚಂದ್ರಶೇಖರ್‌ರವರ ಆಶಯದಂತೆ ಕರ್ನಾಟಕ ಸಂದರ್ಭದಲ್ಲಿ ಸಾಂಸ್ಕೃತಿಕ ವಿಭಾಗವನ್ನಾಗಿ ಪ್ರಾರಂಭಿಸಲಾಯಿತು. ರಾಷ್ಟ್ರದಾದ್ಯಂತ ಹಲವಾರು ರಾಜ್ಯಗಳಲ್ಲಿ ಸಾಮಾಜಿಕ ಸೇವೆಗಳ ವಿವಿಧ ಶಾಖೆಗಳೊಂದಿಗೆ ಕೆಲಸ ಮಾಡುತ್ತಿರುವ ಭಾರತ ಯಾತ್ರಾ ಕೇಂದ್ರವು ಕೇರಳ, ತಮಿಳುನಾಡು, ಉತ್ತರ ಪ್ರದೇಶ, ರಾಜಾಸ್ಥಾನ, ಬಿಹಾರ, ದೆಹಲಿ, ಮಹಾರಾಷ್ಟ್ರ, ಆಂಧ್ರ ಪ್ರದೇಶ... ಮುಂತಾದ ರಾಜ್ಯಗಳಲ್ಲಿ ಅನೇಕ ಜನೋಪಯೋಗಿ ಹಾಗೂ ಸಾಂಸ್ಕೃತಿಕ ಜಾಗೃತಿಯನ್ನುಂಟು ಮಾಡುವ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿವೆ. ಕರ್ನಾಟಕದ ಶಾಖೆಯು 1984ರಲ್ಲಿ ಬಿ. ಎಲ್. ಶಂಕರ್‌ರವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಪುಸ್ತಕ ಹಾಗೂ ಶಾಲಾ ಸಮವಸ್ತ್ರ ವಿತರಣೆ ಮತ್ತು ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮದೊಡನೆ ಪ್ರಾರಂಭವಾದ ಈ ಶಾಖೆಯು ಇಂದು ರಾಷ್ಟ್ರದಲ್ಲಿಯೇ ಒಂದು ಪ್ರಮುಖ ಸಾಂಸ್ಕೃತಿಕ ಸಂಘಟನೆಯಾಗಿ ರೂಪುಗೊಂಡಿದೆ.

ಇಂದಿನ ಪರಿಸರ ಮತ್ತು ನಗರಗಳಲ್ಲಿ ದೈನಂದಿನ ಯಾಂತ್ರಿಕ ಕ್ರಿಯೆಗಳು ವಿದ್ಯಾರ್ಥಿಗಳ ಮುಗ್ಧ ಮನಸ್ಸಿನ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವನ್ನು ಬೀರಲು ಕಳೆದ ಎರಡು ದಶಕಗಳಿಂದ ನಿರಂತರ ಯತ್ನಿಸುತ್ತಿರುವುದು ಎಲ್ಲರಿಗೂ ವೇದ್ಯವಾಗಿರುವ ಸಂಗತಿ. ಕನ್ನಡ ಸಾಂಸ್ಕೃತಿಯ ವಿವಿಧ ಪ್ರಕಾರಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ದೃಷ್ಟಿಯಿಂದ ಕಳೆದ 29 ವರ್ಷಗಳಿಂದ ರಂಗಭೂಮಿ ಕಾರ್ಯಾಗಾರಗಳು, ಸಂಸ್ಕೃತಿ ಶಿಬಿರಗಳು, ಅಂತರ ಕಾಲೇಜು ರಂಗಸ್ಪರ್ಧೆಗಳು, ಕವಿಗೋಷ್ಠಿ, ವಿಚಾರ ಗೋಷ್ಠಿ, ಪುಸ್ತಕ ಪ್ರಕಟಣೆ... ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಭಾರತ ಯಾತ್ರಾ ಕೇಂದ್ರ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಇದಕ್ಕಾಗಿ ಶ್ರಮಿಸುತ್ತಿರುವ ಭಾರತ ಯಾತ್ರಾ ಕೇಂದ್ರ ಮತ್ತು ಪ್ರಯೋಗರಂಗದ ಎಲ್ಲ ಕಲಾವಿದರಿಗೆ, ಜೊತೆಗೆ ಕಾಲೇಜು ಉತ್ಸವದ ಸಂದರ್ಭದಲ್ಲಿ ಅರ್ಹನಿಶಿ ದುಡಿಯುವ ಎಲ್ಲ ಕಾಲೇಜುಗಳ ಆಡಳಿತ ವರ್ಗದವರ ಸಹಕಾರವನ್ನು ಭಾರತ ಯಾತ್ರಾ ಕೇಂದ್ರ ಎಂದಿಗೂ ಮರೆಯಲು ಸಾಧ್ಯವಿಲ್ಲ.

ಭಾರತ ಯಾತ್ರಾ ಕೇಂದ್ರದ ಚಟುವಟಿಕೆಗಳನ್ನು ಕೇವಲ ಬೆಂಗಳೂರಿಗಷ್ಟೇ ಸೀಮಿತಗೊಳಿಸದೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಯಾವುದೇ ಸಾಮಾಜಿಕ ಸಮಸ್ಯೆಗಳಾಗಿರಲಿ, ಅದಕ್ಕೆ ಸದಾ ಸ್ಪಂಧಿಸುವ ಕೇಂದ್ರವಾಗಿ ಭಾರತ ಯಾತ್ರಾ ಕೇಂದ್ರವನ್ನು ಜಿಲ್ಲಾ ಸಂಚಾಲಕರುಗಳು ರೂಪಿಸಿದ್ದಾರೆ. ತಮ್ಮ ವ್ಯಾಪ್ತಿಯ ಯಾವುದೇ ಸಾಮಾಜಿಕ ಸಮಸ್ಯೆಗಳಿಗೆ ಸದಾ ಸ್ಪಂಧಿಸುವ ಕೇಂದ್ರವಾಗಿ ಭಾರತ ಯಾತ್ರಾ ಕೇಂದ್ರಗಳನ್ನು ರೂಪಿಸುತ್ತಿದ್ದಾರೆ. ಸ್ವತಃ ಗಾಯಕರಾಗಿ, ಹಳ್ಳಿ ಹಳ್ಳಿಗಳಲ್ಲಿ ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು, ಜನಪರ ಹೋರಾಟಗಳಿಗೆ ಸಾಂಸ್ಕೃತಿಕ ಸ್ವರೂಪವನ್ನು ನೀಡಿದ್ದಾರೆ. ಈಗಾಗಲೇ ಹಲವು ನಾಟಕೋತ್ಸವ ಮತ್ತು ಸಂಗೀತೋತ್ಸವಗಳನ್ನು ಇತರ ಸಂಘಟನೆಗಳ ಸಹಕಾರಗೊಂದಿಗೆ ರೂಪಿಸಿದ್ದಾರೆ ಹೀಗೆ ಎಲ್ಲ ಜಿಲ್ಲೆಗಳಲ್ಲೂ ಅರಳುತ್ತಿರುವ ಈ ಸಾಂಸ್ಕೃತಿಕ ಚಳುವಳಿಗೆ ಕಲಾವಿದರ ಮತ್ತು ಪ್ರಗತಿಪರರುಗಳಿಂದ ದೊರೆಯುತ್ತಿರುವ ಬೆಂಬಲ ನಿಜಕ್ಕೂ ಸ್ವಾಗತಾರ್ಹವಾಗಿದೆ.

The Bharata Yatra Kendra was launched as a cultural wing in Karnataka at the behest of former Prime Minister Chandrasekhar. The Bharata Yatra Kendra, which has various branches of social services in many states across the country, has been performing many philanthropic and cultural awareness activities in states like Kerala, Tamil Nadu, Uttar Pradesh, Rajasthan, Bihar, Delhi, Maharashtra, Andhra Pradesh. The Karnataka branch of Bharata Yatra Kendra was started by B L Shankar in 1984. Launched with a program to provide free book, school uniforms and library facilities to economically backward children, the branch has today become one of the leading cultural organizations in the country.

The current environment and the monotonous activities of the cities have been influencing the innocent minds of students and moving them away from our core culture and values. For the past 29 years, Bharata Yatra Kendra has been conducting culture workshops, inter-college performances, poetry, seminars, book publishing, etc. to engage students in different forms of Kannada culture. The Bharata Yatra Kendra can never forget the cooperation of all the hardworking performers of Bharata Yatra Kendra and Prayogaranga, as well as the ruling elite of all the colleges in the country in making every theatre festival a grand success.

The activities of the Bharata Yatra Kendra are not just limited to Bengaluru, they are being conducted in various districts of Karnataka. BYK centers also play a role towards addressing social issues in their jurisdiction. Theater and music festivals are organized with the cooperation of other organizations by each of these centers. The support of artists and progressive thinkers is the backbone of this cultural movement that is flourishing in all districts.












BANGALORE UNIVERSITY


ರಂಗಸೌರಭ

RANGASOURABHA

ಕನ್ನಡ ನಾಡು ಪ್ರದರ್ಶನ ಕಲೆಗಳ ಶ್ರೀಮಂತ ಇತಿಹಾಸ ಹೊಂದಿದ ಬೀಡು, ಜಾನಪದ ಕಲೆಗಳು ಹಳ್ಳಿಗಳ ಕಣ ಕಣದಲ್ಲಿ ಬೆರೆತಿವೆ. ಒಂದೆಡೆ ಔದ್ಯೋಗಿಕ ಕ್ರಾಂತಿ ಮತ್ತೊಂದೆಡೆ ಪಾಶ್ಚಾತ್ಯ ಸಂಸ್ಕೃತಿಯ ಕುರುಡು ಅನುಕರಣೆ, ಇವರೆಡರ ನಡುವಿನ ಹೊಯ್ದಾಟದಲ್ಲಿ ಇಂದಿನ ಪೀಳಿಗೆ ಅಕ್ಷರಶಃ ಹೈರಾಣಾಗಿದೆ. ಸಿಲಿಕಾನಿನ ಹೊಳಪು ಹೆಚ್ಚಿದಂತೆಲ್ಲಾ ಪ್ರದರ್ಶನ ಕಲೆಗಳ ಪರಂಪರೆ ಮುಸುಕಾಗುತ್ತಿರುವುದು ಕಳವಳಕಾರಿಯಾಗಿದೆ. ನೀರಿನಲ್ಲಿ ಮುಳುಗುವವನಿಗೆ ಹುಲುಕಡ್ಡಿ ಆಸರೆ ಎಂಬಂತೆ, ಹವ್ಯಾಸಿ ರಂಗಭೂಮಿ ಈ ಸಮಾಜದಲ್ಲಿ ಸಂಜೀವಿನಿಯಾಗಿ ಮೈದಳೆಯುತ್ತಿದೆ.

1999ರಲ್ಲಿ ಪ್ರಾರಂಭವಾದ 'ರಂಗ ಸೌರಭ' ಇಂಥ ಕಲಾ ಸಂಜೀವಿನಿಯಲ್ಲೊಂದು. ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿರುವ ಬಿ.ಎಚ್.ಎಸ್.ಪ್ರಥಮ ದರ್ಜೆ ಕಾಲೇಜು ಇಂದಿನ ವಿಜಯ ಕಾಲೇಜಿನ ಅಸಂಖ್ಯಾತ ರಂಗಾಸಕ್ತರ ಕನಸುಗಳ ಸಾಕಾರರೂಪವೇ ಈ "ರಂಗ ಸೌರಭ". ವಿದ್ಯಾರ್ಥಿ ರಂಗಬಳಗವಾಗಿ ಪ್ರಾರಂಭವಾದ ಈ ತಂಡ ಇಂದು ಕರ್ನಾಟಕದ ರಂಗವೇದಿಕೆಯ ಉತ್ತಮ ತಂಡಗಳಲ್ಲಿ ಒಂದಾಗಿದೆ. ರಂಗ ಸೌರಭದ ಅನೇಕ ಸದಸ್ಯರು ರಂಗಭೂಮಿ, ಕಿರುತೆರೆ ಮತ್ತು ಹಿರಿತೆರೆಗಳಲ್ಲಿ ನಟ, ನಿರ್ದೇಶಕ ಹಾಗೂ ತಂತ್ರಜ್ಞರಾಗಿ ಬದುಕು ಕಟ್ಟಿಕೊಂಡಿದ್ದಾರೆ.

1999ರಲ್ಲಿ "ಅಧೋರಕ್ತಿ" ಎನ್ನುವ ನಾಟಕದ ಮೂಲಕ ತನ್ನ ರಂಗಪಯಣವನ್ನು ಪ್ರಾರಂಭಿಸಿದ ರಂಗಸೌರಭ, ಕಳೆದ 24 ವರ್ಷಗಳಲ್ಲಿ ದೇಶದಾದ್ಯಂತ 13 ಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶಿಸಿದೆ. 2010ರಲ್ಲಿ "ಶಸ್ತ್ರ ಪರ್ವ" ನಾಟಕ ಹರಿಯಾಣದ ರೊಹ್‌ತಕ್ ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಅಂತರ ವಿಶ್ವವಿದ್ಯಾಲಯ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದರೆ, "ಮೈಸೂರು ಮಲ್ಲಿಗೆ" ಮತ್ತು "ಗಂಗಾವತರಣ" ನಾಟಕಗಳು 82ಕ್ಕು ಹೆಚ್ಚು ಪ್ರದರ್ಶನಗಳನ್ನು ನೀಡಿ ರಾಜ್ಯ ಮತ್ತು ದೇಶದ ಹಲವಾರು ಭಾಗಗಳಲ್ಲಿನ ರಂಗಾಸಕ್ತರ ಹೃನ್ಮನಗಳನ್ನು ತಣಿಸಿ ತಮ್ಮ ಯಶೋಗಾಥೆಯನ್ನು ಮುಂದುವರೆಸಿವೆ.

ರಂಗ ಸೌರಭ ಪ್ರಾರಂಭವಾಗಿ 24 ವರ್ಷ ಉರುಳಿವೆ, ಈ 24 ವರುಷಗಳಲ್ಲಿ ರಂಗಸೌರಭ ಅಕ್ಷರಶಃ ಕುಟುಂಬವಾಗಿ ಪರಿವರ್ತನೆಯಾಗಿದೆ. ಪರಸ್ಪರ ಗೌರವ, ಸ್ನೇಹ, ಪ್ರೀತಿ ಮತ್ತು ನಿಃಸ್ವಾರ್ಥ ಮನೋಭಾವ ರಂಗಸೌರಭದ ಆತ್ಮವಾಗಿದೆ.

The rich cultural heritage of Karnataka showcased through its performing arts is losing its sheen from the past decade with the youth interest leaning towards the silicon shine. Theatre is one of the fields that has not lost its attraction among the youth. Theatre clubs across the state have kept this flame alive. Theatre acts as a main pool of talent, supplying artists and technicians to the small as well as big screen.

Formed in the year 1999, Ranga Sourabha is one such theatre club. The result of endless dreams of many theatre enthusiasts of a well-known college in south Bangalore – VIJAYA COLLEGE (erstwhile BHS First Grade College), Rangasourabha, which started out as a student theatre group has now grown into one of the premium teams of Kannada theatre. With a solid talent pool, many members of Rangasourabha are pursuing their professional life as Actors, Directors, Technicians and Scriptwriters in Theatre, TV-Soaps and Movies.

Starting its debut with ADHO RAKTHI in 1999, the team has staged over 13 home productions over the past 24 years. Each of these plays have been recognized for their unique contribution to the field of dramatics. "Shastra Parva" won the National Level Inter University Competitions held at Rohtak, Haryana in 2007. Plays like "Mysooru Mallige" and "Gangavatharana" have drawn critical acclaim from many corners of the state and country.

This year, as Rangasourabha completes 24 years of theatre extravaganza, the spirit of oneness, love and mutual admiration instilled in every member of the team has kept strong the bonds of friendships, some forged over two decades back... and the show goes on...

ತಂಡಗಳು

PARTICIPATING COLLEGES



ಸೌರಭ 23 ರಾಜ್ಯ ಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆಯಲ್ಲಿ ಪ್ರತಿಷ್ಠಿತ ಕಾಲೇಜುಗಳು ಭಾಗವಹಿಸಿದ್ದವು.ಈ ಸಂದರ್ಭದಲ್ಲಿ ಕ್ಯಾಮೆರಾಗೆ ಪೋಸನಿತ್ತ ಬೆಂಗಳೂರು ಹಾಗೂ ಹೊರ ಜೆಲ್ಲೆಯ ಕೆಲ ರಂಗತಂಡಗಳು.

Some of the teams that participated in Sourabha 2023 posing on the inaugural day. The competitions saw active participation from Top colleges from across the state.

ಉದ್ಘಾಟನಾ ಸಮಾರಂಭ

INAUGURATION
















ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರವೂ ಸೌರಭ 23 ರಾಜ್ಯಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆಗಳ ಉದ್ಘಾಟನೆ ಸಾಕ್ಷಿಯಾಯಿತು. ಹಿರಿಯ ಚಲನಚಿತ್ರ ನಟ ಶ್ರೀಯುತ ಅಶೋಕ್ ಅವರು ಸೌರಭ 23ಕ್ಕೆ ಚಾಲನೆ ನೀಡಿದರು. ಖ್ಯಾತ ಕುಚಿಪುಡಿ ಕಲಾವಿದೆ ಶ್ರೀಮತಿ ವೈಜಯಂತಿ ಕಾಶಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ನಟ ಅಚ್ಯುತ್ ಕುಮಾರ್ ಹಾಗೂ ಬಿ. ಸುರೇಶ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹತ್ತಾರು ಕಾಲೇಜಿನ ರಂಗತಂಡಗಳು ಈ ವೇಳೆ ಹಾಜರಿದ್ದವು. ಇದೇ ವೇಳೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅತಿಥಿಗಳು ವ್ಯಕ್ತಿತ್ವವಿಕಸನದಲ್ಲಿ ಕಲೆ ಹಾಗೂ ರಂಗಶಿಕ್ಷಣದ ಮಹತ್ವವನ್ನು ವಿವರಿಸು ಜೊತೆಗೆ ತಮ್ಮ ಅನುಭವವನ್ನು ಹಂಚಿಕೊಂಡರು.

The inauguration of Sourabha' 23, the State Level Inter-College Theater Competitions, was held on the grounds of Ravindra Kalakshetra at Samsa Open Air Auditorium and veteran actor Mr. Ashok flagged off Sourabha 23. The ceremony was presided over by Mrs. Vyjayanthi Kashi, a well-known Kuchipudi performer. B. Suresh and actor Achyut Kumar were present as the chief guests for the day. Numerous college troupes were present, and the guests who spoke to the youngsters, meanwhile emphasized the importance of theater and the arts in personality development along with sharing their own experiences.

ಜಾನಪದ ವೃಂದಗಾಯನ

GROUP SONG(FOLK)



ಉದ್ಘಾಟನಾ ಸ್ಪರ್ಧೆಯಾಗಿ ಜಾನಪದ ವೃಂದಗಾಯನವನ್ನು ಆಯೋಜಿಸಲಾಗಿತ್ತು. ಸಂಸ ರಂಗಮಂದಿರದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ವಿವಿಧ ರಂಗತಂಡಗಳು ಅಮಿತೋತ್ಸಾಹದಿಂದ ಪಾಲ್ಗೊಂಡಿದ್ದವು. ಸ್ಪರ್ಧೆಯಲಿ ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ತಂಡ ಜಯಶಾಲಿಯಾಗಿ ಹೊರಹೊಮ್ಮಿತ್ತು.

Group Song (Folk) was organized as the inaugural competition. Many theatre teams participated in the competition with enthusiasm. B M S College of Commerce and Management was placed ?rst in the competition.

ಅಂಜನಾನಂದನಂ ವೀರಂ

ANJANANANDANAM VEERAM

















ರಚನೆ
ಅನುಷಾ ಪೂರ್ಣ ಎಸ್.

PLAYWRIGHT
Anusha Poorna S.

ನಿರ್ದೇಶನ
ಅನುಷಾ ಪೂರ್ಣ ಎಸ್.

DIRECTION
Anusha Poorna S.

ಪ್ರದರ್ಶನ
ಆರ್. ವಿ. ಡಿ ಕಾಲೇಜ್ ಆಫ್ ಮ್ಯಾನೇಜ್ಮೆಂಟ್
(ಇನ್ಫಾರ್ಮೇಶನ್ ಟೆಕ್ನಾಲಜಿ)

PRODUCTION
R V D College of Management
(Information Technology)

ಹೆಬ್ಬಾಲ

HEBBALA



ರಚನೆ
ಡಾ. ಎಂ ಬೈರೇಗೌಡ

PLAYWRIGHT
Dr. M Byregowda

ನಿರ್ದೇಶನ
ಪ್ರೊ. ಮಧುರ ಡಿ

DIRECTION
Prof. Madura D

ಪ್ರದರ್ಶನ
ನಾಗಾರ್ಜುನ ಪದವಿ ಕಾಲೇಜು

PRODUCTION
Nagarjuna Degree College

ಬಿರುದೆಂತೆಂಬರ ಗಂಡ

BIRUDENTEMBARA GANDA

















ರಚನೆ
ಸಂಸ

PLAYWRIGHT
Samsa

ನಿರ್ದೇಶನ
ಮಹೇಶ್ ಎಸ್ ಪಲ್ಲಕಿ

DIRECTION
Mahesh S Pallaki

ಪ್ರದರ್ಶನ
ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು

PRODUCTION
B M S College of Commerce and Management

ಒಡ್ಡರಾಳ

ODDALALA

















ರಚನೆ
ದೇವನೂರು ಮಹಾದೇವ

PLAYWRIGHT
Devanuru Mahadeva

ನಿರ್ದೇಶನ
ನವೀನ್ ಭೂಮಿ

DIRECTION
Naveen Bhumi

ಪ್ರದರ್ಶನ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುಣಿಗಲ್ ತಾಲೂಕು, ತುಮಕೂರು ಜಿಲ್ಲೆ

PRODUCTION
Govt First Grade College, Kunigal, Tumkur Dist.

ನಗರ ಪೂಜೆ ಇದು ಪೌರಕಾರ್ಮಿಕರ ಬಾಳ ಹಾಡಿ

NAGARA POOJE IDU POURAKARMIKARA BAALA HAADI



ರಚನೆ
ಡಾ. ಬೇಳೂರು ರಘುನಂದನ್

PLAYWRIGHT
Dr. Belur Raghunandan

ನಿರ್ದೇಶನ
ಡಾ. ಬೇಳೂರು ರಘುನಂದನ್

DIRECTION
Dr. Belur Raghunandan

ಪ್ರದರ್ಶನ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ

PRODUCTION
Govt First Grade College, Vijayanagara

ಸ್ಮಶಾನ ಕುರುಕ್ಷೇತ್ರ

SMASHANA KURUKSHETRA



ರಚನೆ
ಕುವೆಂಪು

PLAYWRIGHT
Kuvempu

ನಿರ್ದೇಶನ
ಹನುಮಂತರಾಯಪ್ಪ ಎಸ್ ಬಿ

DIRECTION
Hanumantharayappa S B

ಪ್ರದರ್ಶನ
ಸೈಂಟ್ ಜೋಸೆಫ್ ವಿಶ್ವವಿದ್ಯಾಲಯ

PRODUCTION
St. Joseph University

ಮಾ ನಿಷಾದ

MAA NISHADA



ರಚನೆ
ಡಾ. ಗಿರೀಶ್ ಕಾರ್ನಾಡ್

PLAYWRIGHT
Dr. Girish Karnad

ನಿರ್ದೇಶನ
ತೇಜಸ್ ಕೆ ಮತ್ತು ಪುನೀತ್

DIRECTION
Tejas K and Puneeth

ಪ್ರದರ್ಶನ
ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

PRODUCTION
Acharya Institute of Technology

ಆಷಾಢದ ಒಂದು ದಿನ

AASHADADA ONDU DINA

















ರಚನೆ
ಮೋಹನ್ ರಾಕೇಶ್

PLAYWRIGHT
Mohan Rakesh

ನಿರ್ದೇಶನ
ಸಹನಾ ಸೋಮಶೇಖರ್

DIRECTION
Sahana Somashekhar

ಪ್ರದರ್ಶನ
ದಯಾನಂದ ಸಾಗರ್ ವಿದ್ಯಾ ಸಂಸ್ಥೆ

PRODUCTION
Dhayanand Sagar Vidya Samsthe

ಮಾಯಾಬೇಟೆ

MAAYA BETTE



ರಚನೆ
ಕೆ ವೈ ನಾರಾಯಣ ಸ್ವಾಮಿ

PLAYWRIGHT
K Y Narayana Swamy

ನಿರ್ದೇಶನ
ನಂಜುಂಡೇಗೌಡ ಸಿ ಮತ್ತು ದರ್ಶನ್

DIRECTION
Nanjundegowda C and Darshan

ಪ್ರದರ್ಶನ
ಎಸ್ ಜೆ ಬಿ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್

PRODUCTION
S J B College of Management Studies

ಕರ್ನಾಟಕ ವೈಭವ

KARNATAKA VAIBHAVA

















ರಚನೆ
ಶ್ರೀಮತಿ. ಸೌಮ್ಯ ಪ್ರವೀಣ್, ಪ್ರೊ. ದಾಕ್ಷಾಯಿಣಿ ಕೆ ಎನ್
ಪ್ರೊ. ಸಂಧ್ಯಾ ಮಂಜುನಾಥ್

PLAYWRIGHT
Smt. Soumya Praveen, Prof. Dakshayini K N
Prof. Sandhya Manjunath

ನಿರ್ದೇಶನ
ಶ್ರೀಮತಿ. ಸೌಮ್ಯ ಪ್ರವೀಣ್

DIRECTION
Smt. Soumya Praveen

ಪ್ರದರ್ಶನ
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ

PRODUCTION
Mount Carmel College, Autonomous

ಸತಿ

SATI

















ರಚನೆ
ಹೆಚ್.ಎಸ್. ಶಿವಪ್ರಕಾಶ್

PLAYWRIGHT
H. S. Shivaprakash

ನಿರ್ದೇಶನ
ಪ್ರಶಾಂತ್ ಶೆಟ್ಟಿ

DIRECTION
Prasanth Shetty

ಪ್ರದರ್ಶನ
ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)

PRODUCTION
Christ (Deemed University)

ಮಾಧವಿ ಅಂದು ಇಂದು

MADHAVI ANDU INDU



ರಚನೆ
ಭೀಷ್ಮ ಸಹನಿ

PLAYWRIGHT
Bheeshma Sahani

ನಿರ್ದೇಶನ
ಸಿದ್ಧಾರ್ಥ ಮಾಧ್ಯಮಿಕ

DIRECTION
Siddarth Madhyamika

ಪ್ರದರ್ಶನ
ನ್ಯಾಷನಲ್ ಕಾಲೇಜು ಸ್ವಾಯತ್ತ, ಬಸವನಗುಡಿ

PRODUCTION
The National College, Autonomous, Basavanagudi

ಹೂ ಮತ್ತು ಗಾಳಿ

HOOVU MATHU GAALI

















ರಚನೆ
ಜೋಸೆಫ್ ಜಾನ್

PLAYWRIGHT
Joseph John

ನಿರ್ದೇಶನ
ಜೋಸೆಫ್ ಜಾನ್

DIRECTION
Joseph John

ಪ್ರದರ್ಶನ
ಧನ್ವಂತರಿ ಅಕಾಡೆಮಿ ಫಾರ್ ಮ್ಯಾನೇಜ್ಮೆಂಟ್

PRODUCTION
Dhanwantari Academy for Management Studies

ರಕ್ತ ಕಣಗಿಲೆ

RAKTHA KANAGILE



ರಚನೆ/ ಅನುವಾದಿಸಿದವರು
ರವೀಂದ್ರನಾಥ ಟ್ಯಾಗೋರ್/ ಕೆ ಮರಳಸಿದ್ದಪ್ಪ

PLAYWRIGHT / TRANSLATED BY
Rabindranath Tagore/ K Maralasidhappa

ನಿರ್ದೇಶನ
ಮಾಲ್ತೇಶ ಬಡಿಗೇರ

DIRECTION
Maltesh Badigera

ಪ್ರದರ್ಶನ
ಶಿವಾನಂದ ಶರ್ಮಾ ಮೆಮೋರಿಯಲ್ ಆರ್. ವಿ. ಕಾಲೇಜು

PRODUCTION
Sivananda Sharma Memorial R V College - S. S. M. R. V.

ದೇವರುಗಳಿವೆ ಎಚ್ಚರಿಕೆ!

DEVARUGALIVE YECHARIKE



ರಚನೆ
ಸಂಗಮೇಶ್ ಉಪಾಸೆ

ನಿರ್ದೇಶನ
ನಂಜಪ್ಪ ಎಸ್ ದೊಡ್ಡಮುದುರೆ

ಪ್ರದರ್ಶನ
ಸರ್ಕಾರಿ ಆರ್. ಸಿ. ಕಾಲೇಜು

PLAYWRIGHT
Sangamesh Upase

DIRECTION
Nanjappa S Doddamudure

PRODUCTION
Govt. R C College

ಟೊಳ್ಳುಗಟ್ಟಿ ಅಥವಾ ಮಕ್ಕಳಿಸ್ಕೂಲ್ ಮನೇಲಲ್ಲವೇ?

TOLLUGATTI ATHAVA MAKALISCHOOL MANELALVE

















ರಚನೆ
ಟಿ ಪಿ ಕೈಲಾಸಂ

PLAYWRIGHT
T P Kailasam

ನಿರ್ದೇಶನ
ಶಶಿಕಲಾ ಎನ್

DIRECTION
Shashikala N

ಪ್ರದರ್ಶನ
ಜಿಂದಾಲ್ ಮಹಿಳಾ ಕಾಲೇಜು

PRODUCTION
Jindal Mahila College

ನಾಯಿ ಕಥೆ

NAYI KATHE



ರಚನೆ
ಡಾ. ಚಂದ್ರಶೇಖರ ಕಂಬಾರ

PLAYWRIGHT
Dr. Chandrashekhar Kambar

ನಿರ್ದೇಶನ
ಹರೀಶ್ ರುದ್ರಯ್ಯ ಮತ್ತು ಕಾರ್ತಿಕ್

DIRECTION
Harish Rudraya and Karthik

ಪ್ರದರ್ಶನ
ದಿ. ನ್ಯಾಷನಲ್ ಕಾಲೇಜ್, ಜಯನಗರ

PRODUCTION
The National College, Autonomous, Jayanagar

ಸೇವಂತಿ ಪ್ರಸಂಗ

SEVANTHI PRASANGA

















ರಚನೆ
ರಂಗ ವಿಲಾಸ

PLAYWRIGHT
Ranga Vilasa

ನಿರ್ದೇಶನ
ವಿಜಯ್ ಕಶ್ಯಪ್ ಕೆ ಎಸ್

DIRECTION
Vijay Kashyap K S

ಪ್ರದರ್ಶನ
ವಿಜಯ ಕಾಲೇಜ್, ಜಯನಗರ

PRODUCTION
Vijaya College, Jayanagar

ಜಾನಪದ ನೃತ್ಯ

FOLKDANCE



ಫೆಬ್ರವರಿ 1ರ ಸಂಜೆ ಸಂಸ ಬಯಲು ರಂಗಮಂದಿರ ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾಯ್ತು. ಗಂಧರ್ವ ಲೋಕವೇ ಧರೆಗಿಳಿದಿದ್ದ ರಸಸಂಜೆಯಲ್ಲಿ, ವಿವಿಧ ಕಾಲೇಜಿನ ರಂಗತಂಡಗಳ ವಿದ್ಯಾರ್ಥಿಗಳು, ಕರ್ನಾಟಕದ ವಿವಿಧ ಜಾನಪದ ಪ್ರಕಾರಗಳನ್ನು ಪ್ರದರ್ಶಿಸಿದವು. ಸ್ಪರ್ಧೆಯಲ್ಲಿ ಸಿಡಿಲಬ್ಬರದ ಪ್ರದರ್ಶನ ನೀಡಿದ ಸರ್ಕಾರಿ ಆರ್. ಸಿ. ಕಾಲೇಜು ಪ್ರಶಸ್ತಿಗಳಿಸಿತು.

On the evening of February 1, Samsa Open Air Auditorium witnessed an prodigious event. Various colleges showcased the different folk genres of Karnataka in the dusk of the magical evening. Govt. R. C. College won the title.

ಸಂಸ ಪ್ರಶಸ್ತಿ 2023

SAMSA AWARD 2023

















ಸಂಸ ಎಂದೇ ಜನಜನಿತರಾಗಿರುವ ಕನ್ನಡ ಖ್ಯಾತ ನಾಟಕಕಾರ 'ಎ. ಎನ್. ಶೇಷಾದ್ರಿ ಅಯ್ಯರ್' ಅವರ ಗೌರವಾರ್ಥವಾಗಿ ಸಂಸ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ವಿಶೇಷವಾಗಿ ಕಾಲೇಜು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ವಿದ್ಯಾರ್ಥಿಗಳಿಗೆ ರಂಗದೀಕ್ಷೆ ನೀಡುತ್ತಿರುವ ಸಂಚಾಲಕರನ್ನು ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಅವರನ್ನು ಈ ಮೂಲಕ ಗೌರವಿಸಲಾಗುತ್ತಿದೆ. ಸೌರಭ 23 ರ ಸಂಸ ಪ್ರಶಸ್ತಿಯನ್ನು ಜಿಂದಾಲ್ ಕಾಲೇಜಿನ ಶ್ರೀಮತಿ ಶಶಿಕಲಾ ಹಾಗೂ ಧನ್ವಂತರಿ ಕಾಲೇಜಿನ ಶ್ರೀಯುತ ಗಣೇಶ್ ಅವರಿಗೆ ನೀಡಲಾಗಿದೆ.

Sourabha has established a prize in Samsa's honor. This pen name belongs to the well-known Kannada dramatist A. N. Sheshadri Iyer. He has significantly improved Kananda Theater. Sourabha yearly recognizes a college faculty member who also acts as a team's coordinator. For instance, the Samsa Award of Saurabha 23 has been awarded to Mr. Ganesh of Dhanvantari College and Mrs. Shashikala of Jindal College for their active involvement in the organization and mentorship of students in the theater industry.

ರಂಗ ರಸಪ್ರಶ್ನಾವಳಿ

THEATRE QUIZ













ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ರಂಗ ರಸಪ್ರಶ್ನಾವಳಿ ಸ್ಪರ್ಧೆ ಆಯೋಜಿಸಲಾಗಿತ್ತು. ರಂಗಭೂಮಿ ಇತಿಹಾಸ ಹಾಗೂ ಸಾಹಿತ್ಯದ ಬಗೆಗಿನ ಪ್ರಶ್ನಾವಳಿಯಲ್ಲಿ ವಿವಿಧ ಕಾಲೇಜಿನ ರಂಗತಂಡಗಳು ಪಾಲ್ಗೊಂಡಿದ್ದವು. ಕೌತುಕ ಭರಿತವಾಗಿದ್ದ ಸ್ಪರ್ಧೆಯಲ್ಲಿ ಎಸ್. ಎಸ್. ಎಂ. ಆರ್.ವಿ. ಕಾಲೇಜು ಪ್ರಥಮ ಬಹುಮಾನಗಳಿಸಿತು.

The Theatre Quiz Competition was held at the Ravindra Kalakshetra premises. Various colleges participated in a questionnaire on theater history and literature. In a nailbiting ?nish SSMRV College won the ?rst prize.

ಶಾಸ್ತ್ರೀಯ ನೃತ್ಯ

CLASSICAL DANCE



ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ನಯನ ರಂಗಮಂದಿರದಲ್ಲಿ ಪದ್ಮಭೂಷಣ ವೆಂಕಟಲಕ್ಷಮ್ಮ ನೃತ್ಯ ಪಾರಿತೋಷಕಕ್ಕಾಗಿ ವಿದ್ಯಾರ್ಥಿಗಳು ಸೆಣಸಾಡಿದರು. ಉತ್ತಮ ಸ್ಪರ್ಧೆ ನೀಡಿದ ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಪಾರಿತೋಷಕ ಗೆದ್ದುಕೊಂಡಿತು.

At the Nayana Auditorium in the premises of Ravindra Kalakshetra, dance students competed for the coveted Padmabhushana Venkatalakshmamma rolling trophy. With a stellar performance, B M S College of Commerce and Management won the award.

ಆರ್. ವಿ. ಪ್ರಭಾಕರ ಪ್ರಶಸ್ತಿ

R.V. PRABHAKAR AWARD



ಶ್ರೀ ಹನು ರಾಮಸಂಜೀವ

ಪ್ರಶಸ್ತಿ ಪುರಸ್ಕೃತರು

ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ಸತ್ವಶೀಲತೆಯಿಂದ ತಮ್ಮನ್ನು ತೊಡಗಿಸಿಕೊಂಡು ರಂಗಭೂಮಿಯ ಅರ್ಥವಂತಿಕೆಗೆ ಸಾರವತ್ತಾದ ಕೊಡುಗೆ ಸಲ್ಲಿಸುತ್ತ ಬಂದಿರುವ ಶ್ರೀ ಹನು ರಾಮಸಂಜೀವ ಅವರಿಗೆ ಭಾರತ ಯಾತ್ರಾ ಕೇಂದ್ರ ಹಾಗೂ ರಂಗಸೌರಭ ನೀಡುತ್ತಿರುವ ಅಭಿನಂದನಾ ಪತ್ರ.

ಕಳೆದ ಹದಿನೈದಕ್ಕೂ ಹೆಚ್ಚು ವರ್ಷಗಳಿಂದ ರಂಗಭೂಮಿ ಸೇವೆಯಲ್ಲಿ ಸಕ್ರಿಯರಾಗಿರುವ ತಮ್ಮ ರಂಗಪಯಣ ಪ್ರಾರಂಭವಾದದ್ದು 2007ರಲ್ಲಿ. ಎಸ್.ಜೆ.ಬಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಇಂಜಿನಿಯರಿಂಗ್ ಪದವಿ ಹಾಗೂ ಬಿ.ಎಂ.ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ನಿಂದ ಮಾಸ್ಟರ್ ಆಫ್ ಟೆಕ್ನಾಲಜಿ ಪದವಿ ಪಡೆದಿರುವ ತಮ್ಮನ್ನು ಎಳೆಯ ಹರೆಯದಲ್ಲಿಯೇ ರಂಗಭೂಮಿ ಕೈಬೀಸಿ ಕರೆಯಿತು. ತಮ್ಮ 17ನೇ ವಯಸ್ಸಿನಲ್ಲಿ ವೀ ಮೂವ್ ಫೌಂಡೇಶನ್ (ಪ್ರಸ್ತುತ ವೀ ಮೂವ್ ಥಿಯೇಟರ್) ಜೊತೆಗಿನ ನಂಟು ಹವ್ಯಾಸಿ ರಂಗಭೂಮಿಗೆ ತಮ್ಮನ್ನು ಪರಿಚಯಿಸಿತು. ರಂಗನಿರ್ಮಾಣದ ಕ್ಷೇತ್ರದಲ್ಲಿ ಮೊದಲ ಹೆಜ್ಜೆಯಿರಿಸಿದ ತಾವು ವ್ರತಶೀಲರಂತೆ ಮುಂದುವರೆದು ನಟನೆ, ಬೆಳಕಿನ ವಿನ್ಯಾಸ, ಪ್ರಸಾದನ ಮುಂತಾದ ಕ್ಷೇತ್ರಗಳಲ್ಲಿ ವಿಶೇಷವಾದ ಆಸಕ್ತಿಯೊಂದಿಗೆ ತೊಡಗಿಕೊಂಡಿರಿ. ವೀ ಮೂವ್ ಸಂಸ್ಥೆಯೊಂದಿನ ಒಡನಾಟದ ಪ್ರಭೆಯಲ್ಲಿ ರಂಗಾಸಕ್ತಿಯ ವ್ಯಾಪ್ತಿಯನ್ನು ವಿಶಾಲಗೊಳಿಸಿಕೊಂಡ ತಾವು ರಂಗನಿರ್ದೇಶಕರಾಗಿಯೂ ಯಶಸ್ಸುಕಂಡಿರಿ. ರಂಗಭೂಮಿಯ ಚೈತನ್ಯಶೀಲತೆಯನ್ನು ರಂಗಾಸಕ್ತರಲ್ಲಿ ಬಿತ್ತುವ ಪ್ರಯತ್ನವಾಗಿ ಬೀದಿನಾಟಕ, ಕಿರುನಾಟಕ ಮತ್ತು ಮೂಕಾಭಿನಯ ತರಬೇತಿಯಲ್ಲಿ ತೊಡಗಿ ರಂಗಭೂಮಿಯನ್ನು ಪ್ರತಿಭಾ ರತ್ನಗಳಿಂದ ಸಂಪದ್ಭರಿತಗೊಳಿಸಿದಿರಿ. ರಂಗಕಲೆಗಳಲ್ಲಿ ಆಸಕ್ತರಾದ ಯುವ ಪ್ರತಿಭಾವಂತರಿಗೆ ಪ್ರೋತ್ಸಾಹವಿತ್ತು ಅವರ ಪ್ರತಿಭಾ ಪ್ರಕಾಶಕ್ಕೆ ವೇದಿಕೆಯಾಗುವ ಸದುದ್ದೇಶದಿಂದ 2013ರಲ್ಲಿ ಪ್ರವರ ಆರ್ಟ್ ಸ್ಟುಡಿಯೋ ಸ್ಥಾಪಿಸಿದಿರಿ. ಪ್ರವರ ಆರ್ಟ್ ಥಿಯೇಟರ್ ಎನ್ನುವ ಹೆಸರಿನಲ್ಲಿ ಪ್ರಸ್ತುತ ಕ್ರಿಯಾಶೀಲವಾಗಿರುವ ಈ ವೇದಿಕೆಯ ಮೂಲಕ ಕಳೆದ ಹತ್ತು ವರ್ಷಗಳಲ್ಲಿ ಅನೇಕ ಪರಿಣಾಮಕಾರಿಯಾದ ಪ್ರಯೋಗಗಳನ್ನು, ಮಹತ್ವಪೂರ್ಣವಾದ ಕೃತಿಗಳ ರಂಗ ರೂಪಾಂತರಗಳನ್ನು ಸಾದರಪಡಿಸಿರುತ್ತೀರಿ. 150ಕ್ಕೂ ಹೆಚ್ಚಿನ ಪ್ರದರ್ಶನಗಳು ಹಾಗೂ ಈ ವೇದಿಕೆಯ ಆಶ್ರಯದಲ್ಲಿ ಅರಳಿರುವ 200ಕ್ಕೂ ಹೆಚ್ಚಿನ ರಂಗೋತ್ಸಾಹಿ ಮನಸ್ಸುಗಳು ತಮ್ಮ ರಂಗಪರಿಶ್ರಮಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಪ್ರದರ್ಶನ ಕಲೆ ಆಧಾರಿತ ಶಿಕ್ಷಣದ ಮೂಲಕ ಕೌಶಲಾಭಿವೃದ್ಧಿಯ ಹಾದಿಯನ್ನು ಪರಿಚಯಿಸಿ ರಂಗಶಿಕ್ಷಣಕ್ಕೆ ಅನನ್ಯವಾದ ಮತ್ತು ಅರ್ಥಪೂರ್ಣವಾದ ಆಯಾಮವನ್ನು ತಾವು ನೀಡಿದ್ದೀರಿ. ಈ ದಿಸೆಯಲ್ಲಿ ತಮ್ಮಿಂದ ತರಬೇತುಗೊಂಡ 6,000ಕ್ಕೂ ಹೆಚ್ಚು ರಂಗಾಸಕ್ತರು ತಮ್ಮ ಧ್ಯೇಯೋದ್ದೇಶಗಳ ಸಾಕಾರರೂಪವಾಗಿರುತ್ತಾರೆ. ಸಮಾನಮನಸ್ಕರ ಜೊತೆಗೂಡಿ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ 500ಕ್ಕೂ ಹೆಚ್ಚಿನ ಬಾಧಿತ ರಂಗಕರ್ಮಿಗಳಿಗೆ ಸಹಾಯಹಸ್ತವನ್ನು ಚಾಚುವ ಮೂಲಕ ತಮ್ಮ ಸಮಾಜಮುಖಿಯಾದ ಕಾಳಜಿಯನ್ನು ಮೆರೆದಿರುತ್ತೀರಿ. ಅಚ್ಚಳಿಯದ ಶ್ರದ್ಧೆ, ಅನನ್ಯವಾದ ಶಿಸ್ತು, ಸಮರ್ಪಣಾ ಮನೋಭಾವ, ದಣಿವರಿಯದ ತೊಡಗಿಕೊಳ್ಳುವಿಕೆ, ಏಕಾಗ್ರತೆಯೇ ಮೈವೆತ್ತ ಕಾರ್ಯವೈಖರಿ ತಮ್ಮ ಅಪೂರ್ವವಾದ ರಂಗಶ್ರದ್ಧೆಯ ಹೆಗ್ಗುರುತುಗಳಾಗಿವೆ. ತಮ್ಮ ಅನುಪಮ ರಂಗಸೇವೆಯ ಫಲವಾಗಿ ಹಲವಾರು ಪ್ರಶಸ್ತಿ–ಪುರಸ್ಕಾರಗಳಿಗೆ ತಾವು ಭಾಜನರಾಗಿದ್ದೀರಿ, ಇನ್ನೂ ಹಲವು ತಮ್ಮನ್ನು ಅರಸಿ ಬರಲಿವೆ.

ರಂಗಭೂಮಿಗೆ ನಾವೀನ್ಯ ಜೀವಂತಿಕೆಯನ್ನು ತುಂಬಬೇಕೆನ್ನುವ ಸದಾಕಾಲದ ತುಡಿತ, ಸಹ ರಂಗಕರ್ಮಿಗಳೊಂದಿಗೆ ಸ್ನೇಹಪೂರ್ಣವಾದ ಸಜೀವ ಒಡನಾಟ, ಕಾರ್ಯತತ್ಪರತೆ, ದೂರದೃಷ್ಟಿ, ಸೃಜನಶೀಲತೆ, ಸ್ಪಂದನಶೀಲತೆ, ಸೂಕ್ಷ್ಮಗ್ರಾಹಿತ್ವ, ಗುಣಗ್ರಾಹಿತ್ವ ಮೊದಲಾದ ವಿಶೇಷ ಗುಣಗಳಿಂದ ನಾಡಿನ ರಂಗಾಸಕ್ತ ಮನಸ್ಸುಗಳಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿರುವ ತಮಗೆ ಹಾಗೂ ತಮ್ಮ ಕುಟುಂಬ ವರ್ಗದವರಿಗೆ ಆ ಭಗವಂತನು ಆರೋಗ್ಯ, ಆಚಿುಸ್ಸು, ಐಶ್ವರ್ಯ ನೆಮ್ಮದಿಗಳನ್ನು ನೀಡಿ ತಮ್ಮ ಜೀವನವು ಸುಖಮಯವಾಗಿರಲಿ ಹಾಗೂ ತಮ್ಮ ರಂಗಸೇವೆ ನಿರಂತರವಾಗಿ ಸಾಗಲಿ ಎಂದು ನಾವೆಲ್ಲರೂ ಆಶಿಸುತ್ತೇವೆ.

ಯುವ ರಂಗ ಸಂಘಟನೆಯ ನಿಟ್ಟಿನಲ್ಲಿನ ತಮ್ಮ ಬದ್ಧತೆ, ಅಪಾರತೆ, ಅನುಭವ ಹಾಗೂ ಅಸದೃಶ ಸೇವೆಯನ್ನು ಪರಿಗಣಿಸಿ, ಭಾರತ ಯಾತ್ರಾ ಕೇಂದ್ರ ಹಾಗೂ ರಂಗಸೌರಭ ತಮಗೆ ಪ್ರೊ. ಆರ್. ವಿ. ಪ್ರಭಾಕರ ಯುವ ರಂಗ ಸಂಘಟನಾ ಪ್ರಶಸ್ತಿ ಅನ್ನು ದಿನಾಂಕ 09/02/2023 ರಂದು ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ ಗೌರವಪೂರ್ವಕವಾಗಿ ನೀಡುತ್ತಿದೆ. ತಮ್ಮಂಥ ಪ್ರತಿಭೆಗಳು ರಂಗಭೂಮಿಗೆ ಭೂಷಣ.

ಶ್ರೀ ಕೆ. ವಿ. ನಾಗರಾಜಮೂರ್ತಿ

ಪ್ರಧಾನ ಕಾರ್ಯದರ್ಶಿಗಳು – ಭಾರತ ಯಾತ್ರಾ ಕೇಂದ್ರ

ಶ್ರೀ ಡಿ. ಎನ್. ವೆಂಕಟರಾವ್

ಅಧ್ಯಕ್ಷರು – ರಂಗಸೌರಭ

09.02.2023

ಪ್ರಶಸ್ತಿ ಪ್ರದಾನ ಸಮಾರಂಭ

PRIZE DISTRIBUTION FUNCTION









ಸೌರಭ 23, ರಾಜ್ಯಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆಯ ಸಮಾರೋಪ ಸಮಾರಂಭ ಅದ್ಧೂರಿಯಾಗಿ ನೆರವೇರಿತು. ಸಂಸ ಬಯಲು ರಂಗಮಂದಿರದಲ್ಲಿ ನಡೆದ ವರ್ಣರಂಜಿತ ಸಮಾರಂಭಕ್ಕೆ ವಿವಿಧ ಕ್ಷೇತ್ರಗಳ ದಿಗ್ಗಜರು ಆಗಮಿಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು. ಚಲನಚಿತ್ರ ಕಲಾವಿದರಾದ ಅಭಿಷೇಕ್ ಅಂಬರೀಷ್, ಸಪ್ತಮಿ ಗೌಡ. ರಂಗಕರ್ಮಿ ಹಾಗೂ ನಟ ಮಂಡ್ಯ ರಮೇಶ್. ಕಿರುತೆರೆ ಧಾರವಾಹಿ ನಿರ್ದೇಶಕರಾದ ಟಿ.ಎನ್. ಸೀತಾರಾಮ್. ಖ್ಯಾತ ಚಲನಚಿತ್ರ ನಿರ್ದೇಶಕ ರಿಷಬ್ ಶೆಟ್ಟಿ ಆಗಮಿಸಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಿರುತೆರೆಯ ಹೆಸರಾಂತ ನಿರೂಪಕಿ ಶ್ರೀಮತಿ ಮಾಧವಿ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

Sourabha 23, the state-level inter-college competition's grand finale, was staged in a magnificent fashion. Celebrities from various sectors graced the occasion during the vibrant event held at Samsa. Film artists Abhishek Ambarish, Sapthami Gowda,theater worker, and actor Mandya Ramesh, TV serial director T.N. Seetharam and renowned film director Rishabh Shetty arrived and presented the awards to all the winners. Mrs. Madhavi, a well-known television host, served as the anchor of the day.












BOSS


ಸಹಯೋಗ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ


2023


2023
GOLDEN HORSE






























TRANCE
EXPERIMENTAL
ROCK
WHERE WORDS
LEAVE OFF,
MUSIC BEGINS
CLASSICAL











ಶಂಕರ್‌ನಾಗ್ ತೃತೀಯ ನಾಟಕ ಪಾರಿತೋಷಕ

ಹೆಬ್ಬಾಲ

ನಾಗಾರ್ಜುನ ಪದವಿ ಕಾಲೇಜು

SHANKARNAG THIRD BEST PLAY

HEBBALA

Nagarjuna Degree College



ಪ್ರಯೋಗರಂಗ ದ್ವಿತೀಯ ನಾಟಕ ಪಾರಿತೋಷಕ

ನಾಯಿ ಕಥೆ

ದಿ ನ್ಯಾಷನಲ್ ಕಾಲೇಜ್, ಜಯನಗರ

PRAYOGARANGA SECOND BEST PLAY

NAYI KATHE

The National College, Autonomous, Jayanagara



ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಅತ್ಯುತ್ತಮ ನಾಟಕ ಪಾರಿತೋಷಕ

ಮಾ ನಿಷಾದ

ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

SINGANALLURU PUTTASWAMAIAH BEST PLAY

MAA NISHADA

Acharya Institute of Technology

ಪದ್ಮಭೂಷಣ ಡಾ. ಹೆಚ್. ನರಸಿಂಹಯ್ಯ ತೃತೀಯ ಸರ್ವೋತ್ತಮ ಪಾರಿತೋಷಕ

PADMABHUSHANA DR. H. NARASIMHAIAH OVERALL THIRD BEST COLLEGE



ಶಿವಾನಂದ ಶರ್ಮಾ ಮೆಮೋರಿಯಲ್ ಆರ್. ವಿ. ಕಾಲೇಜು – ಎಸ್. ಎಸ್. ಎಂ. ಆರ್. ವಿ

SHIVANANDA SHARMA MEMORIAL R. V. COLLEGE - S. S. M. R. V

ಉಮೇಶ್ ರುದ್ರ ಸರ್ವೋತ್ತಮ ದ್ವಿತೀಯ ಪಾರಿತೋಷಕ

UMESHRUDRA OVERALL SECOND BEST COLLEGE



ನಾಗಾರ್ಜುನ ಪದವಿ ಕಾಲೇಜು

NAGARJUNA DEGREE COLLEGE

ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ

JNANABHARATHI OVERALL BEST COLLEGE



ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು

B M S COLLEGE OF COMMERCE AND MANAGEMENT

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ಅಂಜನಾನಂದನಂ ವೀರಂ

ಕುಬೇರನ ಮಗಳು ಅಂಜನಾಳಿಗೆ ಇರುವ ಶಾಪದ ಸುತ್ತಾ ಹೆಣೆದಿರುವ ನಾಟಕ. ಅತ್ತಿಗೆಯಾದ ಅಂಜನಾಳನ್ನು ಉಳಿಸಿಕೊಳ್ಳಲು ಹನುಮ ವಾಲಿಯೊಂದಿಗೆ ಯುದ್ದಮಾಡಿ ವಿಫಲನಾದಾಗ ಅಂಜನಾ ಶಿವಲಿಂಗದ ಮುಂದೆ ಪ್ರಾಣ ತ್ಯಜಿಸುತ್ತಾಳೆ. ಹನುಮ ತನ್ನ ತಾಯಿಯ ಪ್ರಾಣ ಭಿಕ್ಷೆಯನ್ನು ಬೇಡಿ, ಧರ್ಮ ಅಧರ್ಮದ ಬಗ್ಗೆ ಯಮಧರ್ಮರಾಯನ ಜೊತೆ ನಡೆವ ವಾಗ್ವಾದಿಂದಾಗಿ ಅಂಜನಾಳ ಪ್ರಾಣವನ್ನು ಯಮಧರ್ಮ ಹಿಂದಿರುಗಿಸುತ್ತಾನೆ.

ನಮ್ಮ ಪೌರಾಣಿಕ ನಾಟಕಗಳಲ್ಲಿ ಒಂದು ವಿಶೇಷತೆಯಿದೆ. ಅದೇನಂದರೆ ಈ ನಾಟಕಗಳ ಕಥಾ ವಸ್ತು ನಮಗೆ ಗೊತ್ತಿದ್ದರೂ ಪ್ರತಿ ಪ್ರದರ್ಶನದಲ್ಲೂ ಮೊದಲ ಬಾರಿ ನೋಡುತ್ತಿದ್ದೆವೆಯೋ ಎಂಬಂತಾ ಅನುಭವವಾಗುತ್ತದೆ. ಈ ಮಾತಿಗೆ ಅಂಜನಾಂದನಂ ಹೊರತಾಗಿರಲಿಲ್ಲ. ಅದರಲ್ಲೂ ವಿಶೇಷವಾಗಿ ಕುಬೇರನ ಮಗಳು ಅಂಜನಾಳ ಕಥೆ ಈ ನಾಟಕದಲ್ಲಿ ಚರ್ಚಿತವಾಗಿರುವುದು ಮತ್ತೊಂದು ವಿಶೇಷವೇ.

ಗರ್ಭವತಿಯಾದ ಸೀತೆ ಆಶ್ರಮದಲ್ಲಿ ತಾನು ಗರ್ಭವತಿಯಾಗಿರುವ ಬಗ್ಗೆ ಹೊಟ್ಟೆಯಲ್ಲಿನ ತನ್ನ ಕಂದನ ಜೊತೆ ತಾಯ್ತನದ ಅಕ್ಕರೆಯಲ್ಲಿ ಮಾತನಾಡುವುದರಿಂದ ನಾಟಕ ಆರಂಭವಾಗುತ್ತದೆ. ಸುಮಾರು ಅರವತ್ತು ನಿಮಿಷಕಾಲಾವಧಿಯ ಈ ನಾಟಕ ಮುಗಿದ ನಂತರ, ಈ ನಾಟಕದಲ್ಲಿ ಕಂಡಂತಾ ವಿಶೇಷವೇನು ಎಂದು ಕಣ್ಮುಚ್ಚಿ ಯೋಚಿಸಿದರೆ ಕಣ್ಣ ಕಣಿವೆಯ ಮೇಲೆ ರಪ್ಪೆನೆ ಮೂಡುವುದು ಪ್ರಸಾದನ ಮತ್ತು ವಸ್ತ್ರವಿನ್ಯಾಸ. ಪೌರಾಣಿಕ ಪಾತ್ರಗಳನ್ನು, ಸನ್ನಿವೇಶ ಸಂದರ್ಭಕ್ಕೆ ಅನುಗುಣವಾಗಿ ರಂಗದ ಮೇಲೆ ಮೂಡಿಸುವಲ್ಲಿ ಈ ಇಬ್ಬರೂ ಪ್ರಸಾದನ ಕಲಾವಿದರು ಹಾಗೂ ವಸ್ತ್ರ ವಿನ್ಯಾಸಕರು ಯಶ್ವಸಿಯಾಗಿದ್ದಾರೆ ಎನ್ನಬಹುದಾಗಿದೆ. ನಾಟಕದಲ್ಲಿ ಉಪಯೋಗಿಸಲಾಗಿರುವ ಭಾಷೆ ಸಕಾಲಿಕವಾಗಿದೆಯಾದರೂ ಇನ್ನೊಂದಷ್ಟು ಪರಿಣಾಮಕಾರಿಯಾಗಿ ಇರಬಹುದಾಗಿತ್ತೆನೋ ಎಂದನ್ನಿಸಿದೆ ಇರುವುದಿಲ್ಲ. ಭಾಷೆ ನಾಟಕದ ವಸ್ತುವನ್ನು ವೈಭವೀಕರಿಸಬಲ್ಲದು. ಅದರಲ್ಲೂ ಇಂತಹ ಪೌರಾಣಿಕ ನಾಟಕಗಳಲ್ಲಿ ಇದು ವರಪ್ರದಾನ ಕೂಡ.

ಮೇಳ ನಾಟಕದ ಓಟದ ಜೊತೆಯಲ್ಲಿ ಸಾಥ್ ನೀಡಿತ್ತು. ಅದರೆ ಕೆಲವೆಡೆ ಪಾತ್ರಗಳ ಸಂಭಾಷಣೆ ಮೇಲೆ ಮೇಳ ಓವರ್ ಲ್ಯಾಪ್ ಅಗಿ ರಂಗದ ಮೇಲೆ ಪಾತ್ರಗಳು ಏನು ಮಾತನಾಡುತ್ತಿದ್ದಾರೆ ಅನ್ನೋದು ತಿಳಿಯದೆ ಗೊಂದಲವಾಗುತಿತ್ತು. ದೃಶ್ಯದಿಂದ ದೃಶ್ಯದ ನಡುವಣಾ ಬ್ಲಾಕ್ ಔಟ್ ನಲ್ಲಿ ಮೇಳ ಇನ್ನಷ್ಟು ಚುರುಕಾಗಿರಬಹುದಾಗಿತ್ತು. ಒಂದೆರೆಡು ದೃಶ್ಯದ ಅಂತ್ಯದಲ್ಲಿ ಪಾತ್ರಧಾರಿಗಳು ನಿರ್ಗಮಿಸುವಲ್ಲಿ ಗೊಂದಲ ಉಂಟಾದದ್ದು ಸ್ವಷ್ಟವಾಗಿತ್ತು. (ಜಥುಣ). ಇಂತಹ ಸಂದರ್ಭದಲ್ಲಿ ಪಾತ್ರಗಳ ರಂಗದ ಮೇಲೇ ಫ್ರೀಜ್ಹ್ ಅಗುವುದು ಹೆಚ್ಚು ಸೂಕ್ತವಾಗುತ್ತದೆ. ನಿರ್ದೇಶಕರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿರುತ್ತಾರೆ. ಅದರೂ ಪಾತ್ರಧಾರಿಗಳ ಸಂಭಾಷಣೆಯಲ್ಲಿ ಕೆಲವಡೆ ಒಂದಿಷ್ಟು ಸ್ಪಷ್ಟತೆ ಮೂಡಿ ಬಂದಿದ್ದರೆ ನಾಟಕ ಇನ್ನೂ ಹೆಚ್ಚು ಯಶಸ್ಸು ಕಾಣಬಹುದಾಗಿತ್ತೇನೋ..? ನಾಟಕದ ಉದ್ದಕ್ಕೂ ಹನುಮ ಮತ್ತು ಅಂಜನಾ ಪಾತ್ರಧಾರಿಗಳು ಗಮನ ಸೆಳೆಯುತ್ತಾರೆ.

ಹೆಬ್ಬಾಲ

ನಾಟಕೋತ್ಸವದ ಮೊದಲ ದಿನ, ಇಡೀ ಉತ್ಸವಕ್ಕೆ ಉತ್ಸಹಾ, ಉಲ್ಲಾಸ ನೀಡದ ನಾಟಕ. ಸರಳ ಜಾನಪದ ಕಥೆಗಳನ್ನು ಉತ್ತಮ ರೀತಿಯಲ್ಲಿ ಜನರಿಗೆ ತಲುಪಿಸುವ ಅತ್ಯುನ್ನತ ಪ್ರಯತ್ನ, ಪ್ರತಿಯೊಂದು ಕಥೆಯಲ್ಲೂ ಅದರ ವಿಶಿಷ್ಟತೆಯನ್ನು ಉಳಿಸಿಕೊಂಡು ಮೂಲ ಕಥೆಗೆ ಬೇರೆಯಾಗದಂತೆ ಸುಂದರವಾಗಿ ಹಣೆದಿರುವುದು ನಿರ್ದೇಶಕರ ಚಾಕಚಕ್ಯತೆಯನ್ನು ತೋರಿಸುತ್ತದೆ.

ವಿದ್ಯಾರ್ಥಿಗಳ ಶಿಸ್ತು, ರಂಗದ ಮೇಲೆ ಮತ್ತು ರಂಗದ ಹಿಂದೆ ಎದ್ದು ಕಾಣುತಿತ್ತು. ಸಾಕಷ್ಟು ತಾಲೀಮು ಮಾಡಿ ರಂಗದ ಮೇಲೆ ತಂದಿರುವ ನಾಟಕವೆಂದು ಗೊತ್ತಾಗುವಂತಿತ್ತು. ಬಣ್ಣ ಬಣ್ಣದ ರಂಗಸಜ್ಜಿಕೆ, ಉತ್ಸಾಹಭರಿತ ಜಾನಪದ ಗೀತೆಗಳು ಮತ್ತು ಎಲ್ಲಕ್ಕಿಂತ ಹೆಚ್ಚುಗಮನ ಸೆಳೆದ ಗಾದೆಗಳು, ಸಂದರ್ಭಕ್ಕೆ ತಕ್ಕಂತೆ ನೂರಾರು ಗಾದೆಗಳನ್ನು ಉಪಯೋಗಿಸುತ್ತಿದ್ದದ್ದು ನಮ್ಮ ಭಾಷೆಯ ಸಿರಿತನವನ್ನು ಬಿಂಬಿಸುವಂತಿತ್ತು. ದೊಡ್ಡ ಪಾತ್ರ ಸಣ್ಣ ಪಾತ್ರ ಎಂಬ ಭೇದವಿಲ್ಲದೆ, ಎಲ್ಲಾ ಪಾತ್ರಗಳು ನಾಟಕಕ್ಕೆ ಬೇಕಾದಷ್ಟು ಶ್ರದ್ಧೆಯಿಂದ ಕೆಲಸ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೂ ಶಭಾಷ್.

ಬಿರುದೆಂತೆಂಬರ ಗಂಡ

ಆಕರ್ಷಕವಾದ ಪ್ರಾರಂಭ. ಕುತೂಹಲಕಾರಿ ರಂಗಸಜ್ಜಿಕೆ. ಎನರ್ಜಿ ಕೂಡಿದ ಅಭಿನಯ. ಉತ್ತಮ ಕೋರಸ್‌ನ ಬಳಕೆ. ಆದರೆ ಇದೇ ಕ್ರಿಯೆ, ಇದೇ ಬ್ಲಾಕಿಂಗ್, ಮುಕ್ಕಾಲು ನಾಟಕವಾದರೆ, ಪ್ರೇಕ್ಷಕನಿಗೆ ಆ ಏಕತಾನತೆ ಕ್ಲಿಷ್ಟವಾಗುತ್ತದೆ. ವಿದ್ಯಾರ್ಥಿಗಳು ತಾಲೀಮಿನಲ್ಲಿ ಹಾಗೂ ಪ್ರದರ್ಶನದಲ್ಲಿ ಪಟ್ಟ ಪರಿಶ್ರಮ ಎದ್ದು ಕಾಣುತಿತ್ತು. ವಿಶೇಷವಾಗಿ ಸಾಂಬಾಜಿ ಪಾತ್ರಧಾರಿ ಪೂರ್ಣಚಂದ್ರ ಹಾಗೂ ಮಹಾರಾಣಿ ಲಕ್ಷ್ಮಿ ಅಮ್ಮಣಿದೇವಿ ಪಾತ್ರಧಾರಿ ಹಿತು ಇವರಿಬ್ಬರೂ ಅಭಿನಯದಲ್ಲಿ ಗಮನ ಸೆಳೆದರು.

ಭಾರತೀಯ ವಿಷಯವಸ್ತು, ಭಾರತೀಯ ಇತಿಹಾಸ, ಭಾರತೀಯ ಪಾತ್ರಗಳು, ಆದರೆ ಮೂವರು ನಿರೂಪಕಿಯರ ವಸ್ತ್ರವಿನ್ಯಾಸ ಸಂಪೂರ್ಣವಾಗಿ ಪಾಶ್ಚಾತ್ಯ. ಇದಕ್ಕೆ ಸೂಕ್ತವಾದ ಸಮರ್ಥನೆ ನಾಟಕದಲ್ಲಿ ದೊರಕದೆ ಹೋಯ್ತು. ಎರಡು ಗುಂಪುಗಳ ಸಂಘರ್ಷ ನಾಟಕದುದ್ದಕ್ಕೂ ಎಷ್ಟು ಎನರ್ಜಿ ಇಟ್ಟುಕೊಂಡು ಅಭಿನಯಿಸಿದ್ದರು ಅಂದರೆ. ನಾಟಕಮುಗಿದ ಮೇಲೂ ಪ್ರೇಕ್ಷಕರಿಗೆ ಸುಸ್ತಾಗುವಷ್ಟು!

ಇವರಲ್ಲಿ ಕೆಲವರಾದರೂ ರಂಗಭೂಮಿಯಲ್ಲಿ ತಮ್ಮ ಭವಿಷ್ಯವನ್ನು ಕಂಡುಕೊಂಡರೆ, ನಮಗೆ ಉತ್ತಮ ಪ್ರತಿಭೆಗಳು ದೊರಕುತ್ತವೆ.

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ಒಡಲಾಳ

ಈ ನಾಟಕದಲ್ಲಿ ಮೇಳ ಅತ್ಯುತ್ತಮವಾಗಿತ್ತು, ನಾಟಕ ವಿನ್ಯಾಸ ಕಥೆಯನ್ನು ಹೊಸ ಶೈಲಿಯಲ್ಲಿ ಬಿಂಬಿಸಿತ್ತು, ಉಪಯೋಗಿಸಿದ ಒಂದಷ್ಟು ಸೆಟ್ ಹಾಗು ರಂಗಪರಿಕರಗಳು ಗಮನೀಯ. ಖಭಿಜಟಿಜ ಅಠಟಠಿಥಿಣುಠಟಿ ಬಹಳ ಚೆನ್ನಾಗಿ ಮೂಡಿ ಬಂದಿದ್ದು ನಾಟಕದ ಒಂದಷ್ಟು ಭಾಗದ ಬೆಳಕು ವಿನ್ಯಾಸ ಇನ್ನು ಹೆಚ್ಚು ಪ್ರಭಾವಕಾರಿ ಆಗಿದ್ದರೆ ಒಳ್ಳೆದಿತ್ತು. ನಾಟಕದ ಮುಖ್ಯ ಪಾತ್ರವರ್ಗವು ಬಹಳ ಸೊಗಸಾಗಿ ನಟನೆ ಮಾಡಿದರು, ಅದರಲ್ಲೂ ಸಾಕವ್ವ ಪಾತ್ರ ಮಾಡಿದ ಅಭಿನೇತ್ರಿ ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆದಿದ್ದು ಕಣ್ಣಿಗೆ ಕಟ್ಟಿರೋಹಾಗಿದೆ. ಒಟ್ಟಾರೆ ಒಡಲಾಳ ನಾಟಕದ ತಂಡವು, ಒಂದು ಗ್ರಾಮೀಣ ಕಥೆಯನ್ನು ಅತಿ ನಿಷ್ಠೆಯಿಂದ ಪ್ರೇಕ್ಷಕರ ಮನ ಮುಟ್ಟುವಂತೆ ರಂಗ ರೂಪಕ್ಕೆ ತಂದರು ಎಂದರೆ ತಪ್ಪಾಗಲಾರದು.

ನಗರ ಪೂಜೆ ಇದು ಪೌರಕಾರ್ಮಿಕರ ಬಾಳ ಹಾದಿ

ನಗರಗಳನ್ನು ಸ್ವಚ್ಚವಾಗಿಡುವ ದಿಶೆಯಲ್ಲಿ ಪೌರಕಾರ್ಮಿಕರ ಬದುಕು ಬವಣೆಗಳನ್ನು ತೆರೆದಿಡುವ ಅವರ ಅಂತರಂಗದ ಮೇಲೊಂದು ಕ್ಷಕಿರಣ ಬೀರುವ ಕಥಾವಸ್ತುವನ್ನು ಹೊಂದಿರುವ ವಿಭಿನ್ನ ಶೈಲಿಯ ನಾಟಕವಿದು. ಪೂರಕೆಗಳೇ ನೇಗಿಲಾದ ಪೌರಕಾರ್ಮಿಕರು ಎಂಬುದಾಗಿ ಕಥಾನಕದಲ್ಲಿ ನೀಡಲಾಗಿದೆ. ಆ ಮಾತು ಸತ್ಯವೂ ಹೌದು. ಪೌರಕಾರ್ಮಿಕರಿಗೆ ಅಂಬೇಡ್ಕರ್, ಗಾಂಧಿ ಪೂಜ್ಯರು ಎಂಬುದನ್ನು ಸಾಂಕೇತಿಕವಾಗಿ ತೋರಿಸಲಾಗಿದೆ. ಕಸ ವಿಂಗಡಣೆ ಬಗ್ಗೆ ಅರಿವು ಮೂಡಿಸುವಂತ ಸೂಕ್ತಿಯನ್ನು ರಂಗ ಗೀತೆ ನೃತ್ಯದ ಮೂಲಕ ಬಿಂಬಿಸುವ ಯತ್ನ ಶ್ಲಾಘನೀಯ.

ಮಿಡ್ಲ್ ಕ್ಲಾಸ್ ಮನೆಯೊಳಗಿನ ಕಸ, ಮಲ, ಮೂತ್ರ ವಿಸರ್ಜನೆ ಕ್ರಮವನ್ನು, ದೇಶಿ – ವಿದೇಶಿ ಟಾಯ್ಲೆಟ್ ಗಳ ಬಗ್ಗೆ, ಭೂಮಿಗೆ ಇಳಿಯುವ ಮಲ ಗೊಬ್ಬರವಾಗಿ ಮತ್ತೆ ಗಿಡಮರಗಳು ಹಣ್ಣು ಬಿಡುವ ಪ್ರಕೃತಿ ವರದಾನದ ಬಗ್ಗೆಯ ಮಾಹಿತಿಗಳಿಗೆ ಹಾಸ್ಯದ ಲೇಪನ ಕೊಟ್ಟು ಒಂದು ಸಣ್ಣ ಸಂದೇಶವನ್ನು ಕೊಡುವ ಪ್ರಯತ್ನ ಸಹ ಈ ನಾಟಕದಲ್ಲಿ ಇರುವುದು ವಿಶೇಷ. ಇದರ ನಡುವೆ ದಿಢೀರೆಂದು ನಾಟಕದಲ್ಲಿ ಪ್ರತ್ಯಕ್ಷವಾಗುವ ಶಾಸಕ, ಅವನಿಗೆ ಸ್ವಚ್ಚತಾ ಮಂತ್ರಿ ಅಗುವ ಹಂಬಲ; ಹೀಗಾಗಿ ಪೌರಕಾರ್ಮಿಕರು ಆ ಶಾಸಕನಿಗೆ ದಂಬಾಲು ಬಿದ್ದು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳುವ ದೃಶ್ಯದ ಮೂಲಕ ಪೌರಕಾರ್ಮಿಕರನ್ನು ಜೀವಂತವಾಗಿ ಕಾಡುತ್ತಿರುವ ಜ್ವಲಂತ ಸಮಸ್ಯೆಗಳನ್ನು ತೆರೆದಿಡುವ ಪ್ರಯತ್ನ ನಡೆಸಲಾಗಿದೆ.

ಪೌರಕಾರ್ಮಿಕರಲ್ಲೂ ಸಹ ಕುಟುಂಬಗಳಿವೆ, ಕುಟುಂಬದಲ್ಲಿನ ದಂಪತಿಗಳ ನಡುವೆ ಕನಸಿದೆ, ಆಸೆ ಇದೆ, ಭವಿಷ್ಯದ ಬಗ್ಗೆ ಭರವಸೆ ಇದೆ ಎಂದು ತೋರಿಸಲು ಜನಪ್ರಿಯ ಕನ್ನಡ ಹಳೇ ಸಿನಿಮಾ ಗೀತೆಗಳನ್ನು ಅದರಲ್ಲೂ ವಿಶೇಷವಾಗಿ ಡಾ:ರಾಜಕುಮರ್ ಅವರ ಹಳೇ ಜನಪ್ರಿಯ ಹಾಡುಗಳನ್ನು ಬಳಸಿಕೊಂಡು ಪೌರಕಾರ್ಮಿಕ ಜೋಡಿಗಳ ಕನಸುಗಳನ್ನು, ನೋವು ಬವಣೆಗಳನ್ನು ರಂಗದ ಮೇಲೆ ತರುವ ಯತ್ನ ಮೋಹಕವಾಗಿದೆ; ಶ್ಲಾಘನೀಯ ಕೂಡ.

ಪೌರಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ, ಅವರು ತಮ್ಮ ಮಕ್ಕಳನ್ನು ಕಾನ್ವೆಂಟಿಗೆ ಕಳುಹಿಸುವ ಆಸೆ, ತಮ್ಮ ಮಕ್ಕಳು ಬಿ.ಎ.; ಎಂ.ಬಿ.ಎ ಓದಬೇಕು ಅನ್ನೋ ಅವರ ಹಂಬಲ ಎಲ್ಲವೂ ಪೌರಕಾರ್ಮಿಕರು ಸಹ ಎಲ್ಲರಂತೆ ಮನುಷ್ಯರೇ, ಅವರಿಗೂ ಆಸೆ, ಆಕಾಂಕ್ಷೆಗಳಿವೆ, ಅವರಿಗೂ ಬದುಕುಲು ಬಿಡಿ, ಬದುಕು ಕಟ್ಟಿಕೊಡಲು ಸಹಕರಿಸಿ ಅನ್ನೋ ಸಂದೇಶವನ್ನು ನಾಟಕ ಸಾರುತ್ತದೆ. ಮಗಳ ವಿದ್ಯಾಬ್ಯಾಸಕ್ಕೆ ಮೊಬೈಲ್ ಬೇಕಿದ್ದು ಅದಕ್ಕೆ ಬೇಕಾದ ಹತ್ತು ಸಾವಿರ ಸಂಪಾದಿಸಲು ಹೊರಟ ಮನೆ ಗಂಡ ದುರಂತ ಅಂತ್ಯವನ್ನು ಕಾಣುವ ನಾಟಕೀಯ ಅಂಶದೊಂದಿಗೆ ನಾಟಕ ಕೊನೆಗೊಳ್ಳುತ್ತದೆಯಾದರೂ ನಮಗೂ ಒಂದು ಪುಟ್ಟ ಮನೆ ಇದೆ.. ನಮ್ಮ ಪುಟ್ಟ ಮನೆಯನ್ನು ಗುಡಿಸಿ, ಸಾರಿಸಿ, ಸ್ವಚ್ಚವಾಗಿ ಇಡಲು ನಮಗೂ ಆಸೆಯಿದೆ, ನಮಗೂ ಹೊಟ್ಟೆ ಇದೆ, ನಮಗೂ ಹಸಿವಾಗುತ್ತದೆ, ನಮಗೂ ರುಚಿ ಬೇಕೆನಿಸುತ್ತದೆ, –

ನಾವೆಲ್ಲ ಪೌರಕಾರ್ಮಿಕರು, ನಮಗೂ ಪೌರತ್ವವಿದೆ ಎಂದು ನಾಟಕದ ಅಂತ್ಯದಲ್ಲಿ ಪ್ರತಿ ಪೌರಕಾರ್ಮಿಕನ್ನು ಕೂಗಿ ಹೇಳುತ್ತಿರುವಂತೆ ಭಾಸವಾಗುತ್ತದೆ ಎಂದರೆ ಆ ಮಾತು ಉತ್ಪ್ರೇಕ್ಷೆಯಾಗಲಾರದು.

ಸ್ಮಶಾಣ ಕುರುಕ್ಷೇತ್ರ

ರಾಷ್ಟ್ರಕವಿ ಕುವೆಂಪುರವರ ಈ ನಾಟಕ, ಜೀವನ ಮತ್ತು ಮೃತ್ಯುವಿನ ಬಗ್ಗೆ ಒಂದು ಆಳವಾದ ಆಲೋಚನಾಭರಿತಯೋಚನಾಲಹರಿಯನ್ನು ಹುಟ್ಟಿಸುವಂಥ ಕೃತಿ. ಇಂಥ ನಾಟಕವನ್ನು ಎಲ್ಲಾ ಪಾತ್ರಗಳು ಗೋಳಾಡುವಂತೆ ಬಿಂಬಿಸಿ, ಅದರ ತತ್ವಜ್ಞಾನದ ದೃಷ್ಟಿಕೋನವನ್ನು ಸಂಪೂರ್ಣವಾಗಿ ಕಡೆಗಾಣಿಸಿದಂತೆ ಇತ್ತು. ನಾಟಕದ ಪ್ರಾರಂಭ ಉತ್ತಮವಾಗಿದ್ದಲ್ಲಿ, ಉಳಿದ ಭಾಗ ಹೇಗಿದ್ದರೂ, ಆರಂಭದ ಎನರ್ಜಿಯನ್ನು ಸ್ವಲ್ಪ ಕಾಪಾಡುತ್ತದೆ. ಆದರೆ, ಇದರಲ್ಲಿ ಪ್ರಾರಂಭವೂ ನಿಧಾನವಾಗಿದ್ದು, ನಾಟಕ ಮುಂದುವರೆದಂತೆ ಎನರ್ಜಿ ಮತ್ತಷ್ಟು ಇಳಿಯುತ್ತಾ ಹೋಯಿತು.

ಎಲ್ಲಾ ಪಾತ್ರಗಳು ಒಂದೇ ರೀತಿಯಲ್ಲಿ ಅರಚಿಕೊಂಡು ಅಳುವುದು ಇಡೀ ನಾಟಕದುದ್ದಕ್ಕೂ ಇದ್ದು, ಅದರ ಏಕತಾನತೆ ಪ್ರೇಕ್ಷಕರನ್ನು ಅನಾನುಕೂಲತೆಗೆ ಗುರಿಪಡಿಸಿತ್ತು. ನಟನೆಯಲ್ಲಿ ಕೃಷ್ಣನ ಪಾತ್ರಾಧಾರಿಯಾದ ಹರ್ಷಿತಾ ಈ ಗೋಳಾಟ– ಅರಚಾಟಕ್ಕೆ ಒಂದು ವಿರಾಮ ನೀಡಿ, ಆಹ್ಲಾದಮಯವಾದ ಸಾತ್ವಿಕ ಅಭಿನಯದಿಂದ ಮನಸೆಳೆದಳು. ಉಳಿದಂತೆ ವಸ್ತ್ರ, ರಂಗಸಜ್ಜಿಕೆ, ಪರಿಕರಗಳಿಗೆ ಹೆಚ್ಚು ಗಮನ ನೀಡದಿರುವುದು ಎದ್ದು ಕಾಣುತಿತ್ತು. ಉದಾಹರಣೆಗೆ; ನೀರು ಕುಡಿಸಲು ರಂಗದ ಮೇಲೆ ಸ್ಟೀಲ್ ಲೋಟ ಬಳಸಿದ್ದು, ಕೆಲವು ಪಾತ್ರಗಳು ಯುದ್ಧ ಭೂಮಿಯಲ್ಲಿ ವಸ್ತ್ರ ತೊಟ್ಟಿದ್ದು, ಕೆಲವು ಅರಮನೆಯ ವಸ್ತ್ರ ತೊಟ್ಟಿದ್ದು, ಕೇವಲ ಭೀಮನಿಗ ಮಾತ್ರ ಆಯುಧದ ಬಳಕೆ, ಹೀಗೆ ಹಲವಾರು ಸಣ್ಣ ಲೋಪಗಳು ಕಂಡವು. ಮೇಳ– ಸಂಗೀತ ಉತ್ತಮವಾಗಿದ್ದು, ನಾಟಕದ ಉತ್ತಮ ಅಂಶ ಎಂದೆನಿಸಿಕೊಂಡಿತ್ತು.

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ಮಾ ನಿಷಾಧ

ವನವಾಸ ಮುಗಿಸಿ ಬಂದ ರಾಮ ಅಯೋಧ್ಯೆಯ ಅಗಸನೊಬ್ಬ ಅಡಿದ ಮಾತಿನಿಂದ ಸೀತೆ ಮತ್ತೆ ಅಜನ್ಮವನವಾಸ ಅನುಭವಿಸುವಂತಾಗುವುದರಿಂದ ನೊಂದ ಬಹಿಷ್ಕಾರಕ್ಕೆ ಒಳಗಾದ ಅಗಸ ಸೀತೆಯನ್ನು ಕಂಡು ಕ್ಷಮಾಪಣೆ ಯಾಚಿಸಲು ಬರುವ ಕಥಾನಕ ಇರುವ ನಾಟಕ. ಇಡೀ ರಾಮಾಯಾಣದಲ್ಲೇ ರೋಚಕ ತಿರುವುಗಳನ್ನು, ಮನಮಿಡಿಯುವ ಮಾನವೀಯ ಸಂದರ್ಭಗಳನ್ನು ಹಾಗೂ ಮಾನವ ಕುಲಕ್ಕೆ ಮಾತಿನ ಬಗ್ಗೆ ಅಪೂರ್ವ ಸಂದೇಶ ಸಾರುವ ಸಂದರ್ಭದ ಕಥಾನಕವನ್ನು ಅಷ್ಟೇ ನೈಜವಾಗಿ, ಪರಿಣಾಮಕಾರಿಯಾಗಿ, ನೃತ್ಯ, ಸಂಗೀತದ ಮೂಲಕ ರಂಗದ ಮೇಲೆ ನಿರೂಪಿಸಿದ ನಾಟಕ ಮಾ ನಿಷಾಧ. ಪ್ರಬುದ್ಧ ನಾಟಕೀಯ ಆಂಶಗಳನ್ನು ಮೈಗೂಡಿಸಿಕೊಂಡ ರಂಗ ನಿರೂಪಣೆ. ಪ್ರತಿ ದೃಶ್ಯವೂ ಮೈ ನಿಮಿರೇಳಿಸುವ ಸಂಗೀತ ಮತ್ತು ನೃತ್ಯಮಯದಿಂದ ಕೂಡಿ ರೋಚಕವಾಗಿ ಮೂಡಿಬಂದು ಪ್ರೇಕ್ಷಕನ ಕಣ್ಣತುಂಬಿದ ರಸಾನುಭವ. ವನವಾಸ ಮುಗಿಸಿ ಹಿಂತಿರುಗುವ ರಾಮನ ಅಯೋಧ್ಯೆಯ ಪ್ರವೇಶವೇ ಕಣ್ ಮನ ತಣಿಸುವ ವೇಷಭೂಷಣ, ಕಿವಿಗೆ ಇಂಪು ನೀಡುವ ಸಂಗೀತ, ಲಯಬದ್ಧವಾದ ಹೆಜ್ಜೆ ಸಾಂಕೇತಿಕವಾದ ರಥಗಳಿಂದ ಆರಂಭದಲ್ಲೇ ಪ್ರೇಕ್ಷಕನ ಮನಗೆದ್ದು ಬಿಡುವುದು ನಿಸ್ಸಂದೇಹ. ಅಲ್ಲಿಂದ ಆರಂಭವಾಗುವ ಮಾ ನಿಷಾಧದ ರಂಗ ಪ್ರಯೋಗದ ಮುಂದೆ ಇನ್ನೂ ಹತ್ತು ಹಲವು ವೈವಿಧ್ಯಮಯ ನಾಟಕೀಯ ಆಂಶಗಳಿಂದ, ಮನಸೂರೆಗೊಳ್ಳುವ ಸಂಗೀತ, ನೃತ್ಯಗಳಿಂದ ಸಾಗುತ್ತದೆ. ಸೀತಾ ದೇವಿಯನ್ನು ಭೇಟಿ ಅಗಲು ಬಂದ ಅಗಸ ಆಶ್ರಮದಲ್ಲಿ ಮುನಿಗಳ ಮುಂದೆ ತನ್ನ ಕಥೆ ಹೇಳುವ ವಿಧಾನದಲ್ಲಿ ನಿರ್ದೇಶಕ ಆಳವಡಿಸಿರುವ ಫ್ಲಾಷ್ ಬ್ಯಾಕ್ ರಂಗತಂತ್ರಗಾರಿಕೆ ಅಚ್ಚರಿ ಮಾತ್ರವಲ್ಲ ಪ್ರಸಂಶನೀಯ ಕೂಡ. ಹೊಸತನವೊಂದನ್ನು ಇಲ್ಲಿ ಕಂಡ ಪ್ರೇಕ್ಷಕ ಸಂತುಷ್ಟನಾಗುವುದರಲ್ಲಿ ಸಂದೇಹವೇ ಇಲ್ಲ.

ಪ್ರತಿ ದೃಶ್ಯದ ಪ್ರತಿ ಚೌಕಟ್ಟಿನಲ್ಲೂ ಹೇಳಿ ಮಾಡಿಸಿದ ಸಂಗೀತ, ಸಂಗೀತಕ್ಕೆ ಪೂರಕವಾದ ಬೆಳಕಿನ ವಿನ್ಯಾಸ, ಒಬ್ಬರಿಗಿಂತ ಒಬ್ಬರ ನುರಿತ ಪ್ರತಿಭಾವಂತ ಅಭಿನಯ, ತನ್ನದೆ ಅದ ವಿಶಿಷ್ಟ ಛಾಪು ಹೊಂದಿರುವ ರಂಗ ನಿರೂಪಣೆ ಎಲ್ಲದಕ್ಕೂ ಮೆರಗುಕೊಟ್ಟಂತೆ ವಸ್ತ್ರವಿನ್ಯಾಸ ಕರ್ನಾಡರ ಮಾ ನಿಷಾಧ ನಾಟಕದ ವಿನ್ಯಾಸ, ಸಜ್ಜಿಕೆ, ಬೆಳಕು, ಸಂಗೀತ, ಪ್ರಸಾದನ, ವಸ್ತ್ರವಿನ್ಯಾಸ, ನಿರ್ದೇಶನ ಎಲ್ಲ ಪ್ರಕಾರಗಳಲ್ಲೂ ಉತ್ತಮ ಎನ್ನಿಸಿ ಹಲವು ಕಾಲ ನೆನಪಿನಲ್ಲಿ ಅಚ್ಚಳಿಯದೆ ಉಳಿದು ಹೋಗುವ ನಾಟಕವಾಗುತ್ತದೆ ಎಂದರೆ ಆ ಮಾತು ಉತ್ಪ್ರೇಕ್ಷೆಯಾಗಲಾರದು.

ಆಷಾಢದ ಒಂದು ದಿನ

ಈ ನಾಟಕದ ರಂಗ ಸಜ್ಜಿಕೆ ಅತ್ಯುತ್ತಮವಾಗಿತ್ತು, ರಂಗಪರಿಕರ ಹಾಗು ವಸ್ತ್ರ ವಿನ್ಯಾಸದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ನಾಟಕವನ್ನು ಕಟ್ಟಲಾಗಿತ್ತು. ಬೆಳಕು ವಿನ್ಯಾಸ ಕೂಡಾ ನಾಟಕದ ರಂಗ ಸಜ್ಜಿಕೆಗೆ ತಕ್ಕಂತೆ ಚೆನ್ನಾಗಿತ್ತು, ಎಲ್ಲೂ ತುಂಬಾ ಜಚಿಡಿಞ ಅಥವಾ ಲೈಟ್ ಠಿಚಿಣಛಿಛಿ ಇರಲಿಲ್ಲ, ಸಮಾನವಾಗಿತ್ತು. ಎಲ್ಲ ನಟರು ತಮ್ಮ ಅಭಿನಯವನ್ನು ತುಂಬಾ ಸೊಗಸಾಗಿ ಮಾಡಿದರು, ನಾಟಕದಲ್ಲಿ ಸಂಗೀತಕ್ಕೆ ಹಾಗು ಅಭಿನಯಕ್ಕೆ ಸ್ವಲ್ಪ ಹೊಂದಾಣಿಕೆ ಇರಲಿಲ್ಲ. ನಾಟಕದಲ್ಲಿ ಒಂದಷ್ಟು ಕಡೆ ನೃತ್ಯ ಇದ್ದು, ನೃತ್ಯಗಾರರು ಇನ್ನೊಂದಷ್ಟು ಸಮಯ ತಮ್ಮನ್ನು ತಾಲೀಮಿನಲ್ಲಿ ತೊಡಗಿಸಿಕೊಂಡಿದ್ದರೆ ನಾಟಕ ಇನ್ನು ಉತ್ತಮವಾಗಿ ಮೂಡಿ ಬರುತಿತ್ತು. ಕೆಲವು ನಟರ ಧ್ವನಿ ಬಹಳ ಸಣ್ಣದಾಗಿದ್ದು ಕೇಳ್ಲೋದು ಕಷ್ಟವಾಗಿತ್ತು. ನಾಟಕದ ಮೂಲ ಕಥೆಯನ್ನು ಅಚ್ಚುಕಟ್ಟಾಗಿ ಕಟ್ಟಿ ಕೊಟ್ಟು ಒಂದು ಸುಂದರ ನಾಟಕವನ್ನು ಪ್ರೇಕ್ಷಕರಿಗೆ ಪರಿಚಯಿಸಿದರು.

ಮಾಯಾಬೇಟೆ

ನಾಟಕದ ಪ್ರಾರಂಭ ಸ್ವಲ್ಪ ನಿಧಾನವಾದರೂ ನಾಟಕದ ಕಥಾವಸ್ತು ಹಾಗೂ ವಿದ್ಯಾರ್ಥಿಗಳ ಅಭಿನಯ ಪ್ರೇಕ್ಷಕರನ್ನು ಹಿಡಿದಿಟ್ಟಿತ್ತು. ಒಂದು ಸಾಮಾಜಿಕ ಕಥೆಯಂತೆ ಆರಂಭವಾಗಿ ಅಜ್ಜಿಯ ಪಾತ್ರದ ಮೂಲಕ ಹಲವು ಕತೆಗಳನ್ನು ಹೆಣೆದು ಕೊನೆಗೆ ಅದ್ಭುತವಾದ ಒಂದು ತತ್ವದೊಂದಿಗೆ ಅಂತ್ಯವಾಯ್ತು. ಹೀಗೆ ಪ್ರೇಕ್ಷಕರನ್ನು ಯೋಚನ–ಪ್ರಯಾಣಕ್ಕೆ ಕರೆದುಕೊಂಡ ಹೋದ ನಿರ್ದೇಶಕರ ಕೆಲಸ ಶ್ಲಾಘನೀಯ.

ಅಚ್ಚುಕಟ್ಟಾದ ಸಂಗೀತ ಹಾಗೂ ವಸ್ತ್ರ ವಿನ್ಯಾಸ ಹೊಂದಿದಂತ ಈ ನಾಟಕದ ಮತ್ತೊಂದು ವಿಶೇಷ ಅಂದ್ರೆ ನಾಟಕದ ಭಿತ್ತಿಚಿತ್ರ (ಪೋಸ್ಟರ್). ಬೇರೆಲ್ಲಾ ಭಿತ್ತಿಪ್ರತಗಳಿಗಿಂತ ವಿಭಿನ್ನವಾಗಿ 3–ಡಿ ವಿನ್ಯಾಸವಲ್ಲದೇ ನಾಟಕದ ಸಾಂಕೇತಿಕ ವಿಷಯ ವಸ್ತುವಾದ ದೀಪ ವಾಸ್ತವದಲ್ಲಿ ಹತ್ತಿ ಉರಿಯುವಂತೆ ಮಾಡಿದ್ದು ಉತ್ತಮ ಕ್ರಿಯಾಶೀಲತೆಯನ್ನು ತೋರಿಸಿಕೊಡುತ್ತದೆ.

ರಂಗಸಜ್ಜಿಕೆ ಸ್ವಲ್ಪ ಸಾಧಾರಣ ಅನಿಸಿದರೂ ಕೂಡ, ಬಹಳ ಶ್ರದ್ಧೆಯಿಂದ ಇದರಲ್ಲಿ ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳೂ, ಅದರಲ್ಲಿಯೂ ಅಜ್ಜಿ ಪಾತ್ರಾಧಾರಿ ಭವಾನಿ, ಪುಟ್ಟ ಹುಡುಗನ ಪಾತ್ರದಲ್ಲಿ ಅಫ್ನಾನ್ ಪಾಶ, ಮತ್ತು ಎರಡು ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಶಶಿನ್ ಬಹಳ ಗಮನ ಸೆಳೆದರು.

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ಕರ್ನಾಟಕ ವೈಭವ

ಈ ನಾಟಕದ ಉದ್ದೇಶ ಬಹಳ ಚೆನ್ನಾಗಿತ್ತು, ಕರ್ನಾಟಕ ವಿವಿಧ ವೈಭವಗಳನ್ನು ನಾಟಕದ ರೂಪದಲ್ಲಿ ತೋರಿಸೋ ಪ್ರಯತ್ನ ಶ್ಲಾಘನೀಯ ಆದ್ರೆ ನಾಟಕಕ್ಕೆ ಕಥೆ ಹಾಗು ರಂಗ ವಿನ್ಯಾಸದ ಅವಶ್ಯಕತೆ ಇತ್ತು. ನಾಟಕದ ಅನೇಕ ಭಾಗ ನೃತ್ಯ ರೊಪದಲ್ಲಿ ಇದ್ದು ನಟರು ಇನ್ನು ಸ್ವಲ್ಪ ಹೆಚ್ಚು ತಾಲೀಮು ಮಾಡಿದ್ದರೆ ನಾಟದ ಸ್ವರೂಪ ಇನ್ನು ಸಂಪೂರ್ಣವಾಗ್ತಿತ್ತು. ನಾಟಕದ ವಸ್ತ್ರ ವಿನ್ಯಾಸ ಚೆನ್ನಾಗಿದ್ದು, ಕರ್ನಾಟಕದ ಹಲವಾರು ವೈಭವನ್ನು ಪ್ರೇಕ್ಷಕರಿಗೆ ಪರಿಚಯಿಸುವುದರಲ್ಲಿ ಯಶಸ್ವಿ ಆದರು.

ಮಾಧವಿ ಅಂದು ಇಂದು

ಇದು ಹೆಸರಾಂತ ನಾಟಕಕಾರ ಭೀಷ್ಮ ಸಹಾನಿ ಅವರ ನಾಟಕದ ಕನ್ನಡ ಅನುವಾದ. ಮಹಾಭಾರತದಲ್ಲಿ ಬರುವ ಅನೇಕಾನೇಕ ಉಪಕಥೆಗಳ ಪೈಕಿ ಈ ಮಾಧವಿಯ ಉಪಕಥೆಯು ಒಂದು.

ತನ್ನ ಶಿಷ್ಯವೃತ್ತಿ ಪೂರೈಸಿದ ಒರ್ವ ಶಿಷ್ಯ ತನ್ನ ಗುರುಗಳಿಗೆ ಏನಾದರೂ ಗುರುದಕ್ಷಿಣೆ ನೀಡಲು ಬಯಸಿದಾಗ ಗುರುಗಳು ಬೇಡವೆನ್ನುತ್ತಾರೆ. ಅದರೂ ಬಿಡದ ಶಿಷ್ಯ ಒತ್ತಾಯ ಮಾಡಿದಾಗ ಕುಪಿತಗೊಂಡ ಗುರುಗಳು ಎಂಟುನೂರು ಅಶ್ವಮೇಧದ ಕುದುರೆಗಳನ್ನು ನೀಡುವಂತೆ ಆಜ್ಞಾಪಿಸುತ್ತಾರೆ. ಶಿಷ್ಯ ಕಂಗಾಲಾಗುತ್ತಾನೆ. ಇದು ಅಸಾಧ್ಯ ಎನ್ನಿಸುತ್ತದೆ. ಅವರಿವರ ಸಲಹೆ ಮೇರೆಗೆ ಯಯಾತಿಯ ಬಳಿ ಬಂದು ತನ್ನ ಗೋಳನ್ನು ಹೇಳಿಕೊಳ್ಳುತ್ತಾನೆ. ಎಂಟುನೂರು ಅಶ್ವಮೇಧ ಕುದುರೆಗಳನ್ನು ಕೊಡಲು ಸಾಧ್ಯವಾಗದ ಯಾಯಾತಿ ತನ್ನ ಮಗಳು ಮಾಧವಿಯನ್ನು ಆ ಶಿಷ್ಯನಿಗೆ ದಾನವಾಗಿ ಕೊಟ್ಟು ಅವಳಲ್ಲಿ ಜನಿಸುವ ಮಗ ಚಕ್ರವರ್ತಿ ಆಗಿ ನಿನ್ನ ಆಸೆಯನ್ನು ಪೂರೈಸುತ್ತಾನೆ ಎಂದು ನುಡಿಯುತ್ತಾನೆ. 800 ಅಶ್ವಗಳನ್ನು ಕೊಡಬಲ್ಲ ರಾಜನಿಗೆ ಮಾಧವಿಯನ್ನು ಉಡುಗೊರೆಯನ್ನಾಗಿ ಕೊಡುವುದಾಗಿ ಘೋಷಣೆ ಯಾಗುತ್ತದೆ. ಯಾವ ಚಕ್ರವರ್ತಿಯು ಎಂಟುನೂರು ಅಶ್ವಮೇಧಗಳನ್ನು ಕೊಡಲು ಶಕ್ಯವಿಲ್ಲದ ಕಾರಣ ತಲಾ ಇನ್ನೂರು ಅಶ್ವಮೇಧ ಕುದುರೆಗಳಂತೆ ಕೊಡಬಲ್ಲ ಚಕ್ರವರ್ತಿಗಳಿಗೆ ಮಾಧವಿಯನ್ನು ಉಡುಗೊರೆಯಾಗಿ ಕೊಟ್ಟುಕೊಂಡು ಹೋಗಲಾಗುತ್ತದೆ. ಎರಡನೇ ಚಕ್ರವರ್ತಿ ಅತೀ ಕಾಮುಕನಾಗಿದ್ದು ತುಂಬಿದ ಆಸ್ಥಾನದಲ್ಲಿ ಮಾಧವಿಯನ್ನು ನಿಲ್ಲಿಸಿ ಅವಳ ಅಂಗಾಗಳ ವರ್ಣನೆ ಕೇಳುತ್ತಾ ಬೀಗುತ್ತಿರುವ ದೃಶ್ಯದ ತಾಲೀಮು ನಡೆಯುವಾಗ ಆ ಪಾತ್ರವನ್ನು ನಿರ್ವಹಿಸುತ್ತಿದ್ದ ಮಹಿಳೆ ತಾಲೀಮು ನಿಲ್ಲಿಸಿ ಆ ಸನ್ನಿವೇಶವನ್ನು ಪ್ರತಿಭಟಿಸುತ್ತಾಳೆ. ಅಗಲೇ ನಾಟಕ ತಂಡವೊಂದು ಇಂತಹದೊಂದು ನಾಟಕವನ್ನು ತಾಲೀಮು ಮಾಡುತ್ತಿದೆ ಎಂಬ ಅಂಶ ವ್ಯಕ್ತವಾಗುವುದು. ತಾಲೀಮು ಮಾಡುತ್ತಿರುವ ತಂಡದಲ್ಲಿ ವಾದ ವಿವಾದಗಳಾಗುತ್ತದೆ. 'ಶೋ ಮಸ್ಟ್ ಗೋ ಆನ್..' ಎಂಬ ರೀತಿಯಲ್ಲಿ ನಿರ್ದೇಶಕ ನಾಟಕವನ್ನು ಮುಂದುವರಿಸಲು ಉದ್ಯುಕ್ತನಾಗುತ್ತಾನೆ. ಬೇರೊಂದು ಹೆಣ್ಣು ಆ ಪಾತ್ರ ಮಾಡಲು ಮುಂದೆ ಬಂದು ಮತ್ತೆ ಎಂದಿನಂತೆ ಆದೆ ಜಾಗದಲ್ಲಿ ಸ್ತ್ರೀ ಒರ್ವಳ ಅಂಗಾಗಳನ್ನು ವರ್ಣನೆ ಮಾಡುವ ಸಂದರ್ಭದ ಘಟ್ಟದಲ್ಲಿ ತಾನೂ ಅದನ್ನು ವಿರೋಧಿಸಿ ತಾಲೀಮು ನಿಲ್ಲಿಸುತ್ತಾಳೆ. ಮತ್ತೆ ನಾಟಕ ತಂಡ ಕುಳಿತು ಚರ್ಚೆ ಮಾಡುತ್ತದೆ. ಇದು ತಾವು ಒಪ್ಪುವ ವಾದ, ಸಿದ್ಧಾಂತ, ವೇದಂತಕ್ಕೆ ವಿರುದ್ಧವಾಗಿದೆಯಾದರೂ ನಾಟಕ ಕೈ ಬಿಡಲು ಸಮ್ಮತಿಸುವುದಿಲ್ಲ. ತಮ್ಮ ವೇದಂತ, ಸಿದ್ಧಾಂತವನ್ನು ಬದಿಗಿರಿಸಿ ನಾಟಕ ಪ್ರಯೋಗವನ್ನು ಮುಂದುವರಿಸುತ್ತಾರೆ.

ಮೇಲ್ನೋಟಕ್ಕೆ ಇದು ನಾಟಕದ ವಸ್ತುವಾದರೂ ನಾಟಕ ಹೇಳಲು ಹೊರಟಿರುವ ಸಂದೇಶ ಬಹು ಗಂಭೀರವಾದದ್ದು ಹಾಗೂ ಮಹತ್ತರವಾದದ್ದು. ಅದರೂ ಸಮಸ್ಯೆ ಬಗೆ ಹರಿಸುವತ್ತ ಪ್ರಯತ್ನ ಸಾಗದ ಕುರಡರಂತೆ ಹಳೆಯದನ್ನೆ ಮುಂದುವರಿಸುವ ರಾಜಿ ಹೊಂದಾಣಿಕೆಯನ್ನು ಲೇವಡಿ ಮಾಡುವ ನಾಟಕ. ಇಂತಹ ಗಂಭೀರ ವಸ್ತುವಿರುವ ನಾಟಕಕ್ಕೆ, ನಾಟಕದ ಇತರೆ ಭಾಗಗಳು ರಂಗಸಜ್ಜಿಕೆ, ಬೆಳಕು, ವಸ್ತ್ರವಿನ್ಯಾಸ ಎಲ್ಲವೂ ಸಾಥ್ ಕೊಡಬೇಕಿದ್ದು ಈ ಎಲ್ಲ ವಿಭಾಗಗಳು ನಿರೀಕ್ಷಿತ ಮಟ್ಟವನ್ನು ಮುಟ್ಟದೆ ನಾಟಕ ಸ್ವಲ್ಪ ಮಟ್ಟಿಗೆ ಸೊರಗಿದಂತೂ ನಿಜ. ಇದರ ಜೊತೆಗೆ ನಾಟಕದಲ್ಲಿ ಕ್ರಿಯೆಗಿಂತ ಮಾತೇ ಹೆಚ್ಚಾಗಿದ್ದು ಕೆಲವು ಪಾತ್ರಧಾರಿಗಳ ಮಾತುಗಳು ಅಸ್ಪಷ್ಟವಾಗಿದ್ದು ಸಂಭಾಷಣೆ ಮಾಡಬೇಕಾಗಿದ್ದ ಪರಿಣಾಮವನ್ನು ಮಾಡದೆ ವೈಪಲ್ಯ ಕಂಡಿದ್ದು ನಾಟಕ ನಿರೀಕ್ಷಿತ ಮಟ್ಟಕ್ಕೆ ಏರದಿರಲೂ ಸಹ ಒಂದು ಕಾರಣವಾಯಿತು. ಈ ಎಲ್ಲ ಎಳೆತಗಳ ಕಾರಣದಿಂದಾಗಿ ಸುಮಾರು ಒಂದು ಗಂಟೆ ಇಪ್ಪತ್ತು ನಿಮಿಷ ಕಾಲಾವಧಿಯ ನಾಟಕದಲ್ಲಿ ಏಳೆತ ಕಂಡುಬಂದದ್ದು ಸಹಜವೇ.

ಹೂ ಮತ್ತು ಗಾಳಿ

ಅಲೆಮಾರಿ ಜನಾಂಗದ ಎರಡು ಗುಂಪುಗಳು ವಾಸಕ್ಕಾಗಿ ತಮ್ಮ ನಡುವೆ ಗೋಡೆ ಕಟ್ಟಿಕೊಂಡಿದ್ದು ಒಟ್ಟಾಗಿ ಬಾಳಿದರೆ ಬದುಕು ಜೇನುಗೂಡು ಎಂಬ ಮರ್ಮವನ್ನು ಅರಿತು ತಮ್ಮ ಮಧ್ಯದ ಗೋಡೆಯನ್ನು ಕೆಡವಿ ಒಟ್ಟಾಗಿ ಬಾಳಿ ಸುಖಿಸುವ ಸುಂದರ ಕಥಾನಕವರಿವು ನಾಟಕ ಹೂ ಮತ್ತು ಗಾಳಿ. ಆ ಕಡೆ ತಂಡದ ಹುಡುಗ ಈ ಕಡೆ ತಂಡದ ಹುಡುಗಿ ಇಬ್ಬರೂ ಪರಸ್ಪರ ಪ್ರೇಮಿಸಿ ಆ ಪ್ರೇಮಕ್ಕೆ ಅಡ್ಡಿಯಾದವರೆ ಅವರ ಸಂಗಮಕ್ಕೆ ಕಾರಣರಾಗುತ್ತಾರೆ. ಸೃಜನಶೀಲ ಮಾಧ್ಯಮದಲ್ಲಿ ಈಗಾಗಲೇ ಪುರಾವಿಸಲ್ಪಟ್ಟ ಕಥಾ ವಸ್ತು.

ಒಂದು ಬಟ್ಟಾಬಯಲು ಪ್ರದೇಶಕ್ಕೆ ವಲಸಿಗರ ಗುಂಪೊಂದು ಬರುತ್ತದೆ. ಒಟ್ಟಾಗಿ ಹಾಡಿ ಕುಣಿದು ಸಹಕಾರ ತತ್ವದಲ್ಲಿ ಸುಖವಿದೆ ಅನ್ನುವ ಮಾತನ್ನು ಮತ್ತೊಮ್ಮೆ ಎತ್ತಿ ತೋರಿಸುವ ಅಂಕಣ ಪ್ರೇಕ್ಷಕನಿಗೆ ಮುದ ನೀಡಿತ್ತು. ಇಲ್ಲಿ ಮನಸ್ಸಿಗೆ ಮುದ ನೀಡಿದ ಸಂಗೀತ, ನೃತ್ಯ ಮನಸೂರೆಗೊಳ್ಳುತ್ತದೆ. ಇಲ್ಲಿ ಪ್ರತ್ಯೇಕವಾಗಿ ನಾಯಕ ನಾಯಕಿಯರು ಇಲ್ಲದೆ ಹೋದರು ಗುಂಪು ನಟರ ಅಭಿನಯ, ಲವಲವಿಕೆ, ಇಂಪಾದ ಸಂಗೀತ, ಕುಣಿಸುವ ಹೆಜ್ಜೆಗಳು ನಾಟಕದ ಸೊಗಸಿಗೆ ಪೂರಕವಾಗುತ್ತದೆ. ನೈಜವಾದ ಅಭಿನಯ, ನವಿರಾದ ಹಾಸ್ಯ ಕೂಡಿ ಬಾಳಿದರೆ ಸ್ವರ್ಗ ಸುಖ ಅನ್ನುವ ಮಾತು ಮತ್ತೊಮ್ಮೆ ಎತ್ತಿ ಹಿಡಿಯುವ ನಾಟಕದಲ್ಲಿ ವಲಸಿಗರಲ್ಲಿ ಎರಡು ಗುಂಪಾಗಿ ಗುಂಪಿಗೊಬ್ಬ ನಾಯಕನಾಗಿ, ತಮ್ಮ ತಮ್ಮ ಗುಂಪಿಗೆ ಒಂದು ಬೌಂಡರಿ ಫಿಕ್ಸ್ ಆಗುವುದರ ಮೂಲಕ ಗುಂಪುಗಾರಿಕೆಯ ಉದಯವಾಗಿ ಭೂಮಿಯ ಒಡೆತನ, ನಮ್ಮ ಜಾಗ, ನಮ್ಮ ಜನ ಅನ್ನುವ ಗುಂಪುಗಾರಿಕೆ ತಲೆದೂರಿ ವಲಸಿಗರ ತಂಡ ಇಬ್ಭಾಗವಾಗುವ ನಾಟಕೀಯ ಸನ್ನಿವೇಶಗಳಿಗೂ ಹಾಸ್ಯದ ಲೇಪನ ಮಾಡಿ ಪ್ರಸ್ತುತ ಪಡಿಸಿದ ನಿರ್ದೇಶಕರ ಜಾಣ್ಮೆ ಮೆಚ್ಚುವಂತದ್ದೇ. ಆದರೆ, ಆರಂಭ ಮತ್ತು ಮಧ್ಯ ಮಧ್ಯ ಬರುತ್ತಿದ್ದ ಸೂತ್ರಧಾರ ಆಥವಾ ಕತೆಗಾರನ ಪಾತ್ರ ಅನಗತ್ಯವಾದದ್ದು ಎಂದರೆ ಉತ್ಪ್ರೇಕ್ಷೆಯಾಗಲಾರದು. ವಾಸ್ತವದಲ್ಲಿ ಕಥೆಗೆ ಅವನ ಎಂಟ್ರಿಗಳೆ ರಸ್ತೆಯುಬ್ಬರ ವಾಗುತ್ತಿದದ್ದು ಸತ್ಯ. ವಸ್ತ್ರ ವಿನ್ಯಾಸ, ರಂಗಪರಿಕರಗಳಿಗೆ ಮೊದಲ ಅಂಕ. ವಲಸಿಗರನ್ನು ಎತ್ತಿ ಹಿಡಿಯುವಂತೆ ಸಣ್ಣ ಪುಟ್ಟ ಸಾಮಾಗ್ರಿಗಳು/ವಸ್ತುಗಳ ರಂಗಪರಿಕರ ಗಮನ ಸೆಳೆಯಿತು. ಹಾಡು, ನೃತ್ಯ ಅದಕ್ಕೆ ಪೂರಕವಾದ ಬೆಳಕಿನ ಸಂಯೋಜನೆ ಮನಸೂರೆಗೊಂಡಿತು. ಒಂದು ಗಮನಾರ್ಹ ರಂಗ ಪ್ರಯೋಗ ಈ ಹೂ ಮತ್ತು ಗಾಳಿ ನಾಟಕ.

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ರಕ್ತ ಕಣಗಿಲೆ

ಉತ್ತಮ ರಂಗಸಜ್ಜಿಕೆ, ಬೆಳಕು, ವಸ್ತ್ರ ವಿನ್ಯಾಸ, ಅಭಿನಯ, ಸಂಗೀತ ಎಲ್ಲವೂ ಇದ್ದರೂ ಒಟ್ಟಾರೆ ನಾಟಕ ಕೂಡಿಬರಲಿಲ್ಲ. ರವೀಂದ್ರನಾಥ ಟ್ಯಾಗೂರ್ ಅವರ ಈ ನಾಟಕ ಅತ್ಯಂತ ಭಾವನಾತ್ಮಕವಾಗಿದ್ದು, ಅದನ್ನು ಅಷ್ಟೇ ಚೆನ್ನಾಗಿ ರಂಗದ ಮೇಲೆ ಪ್ರಸ್ತುತಪಡಿಸಿದ್ದು ಸಹ, ಅದರ ಕಥಾವಸ್ತು ಇಂದಿನ ವರ್ತಮಾನಕ್ಕೆ ಸರಿಹೊಂದದ ಕಾರಣ, ಪ್ರೇಕ್ಷಕರೊಡನೆ ಆ ಸಂಪರ್ಕ ಬೆಳೆಯದೇ ಹೋಯ್ತು.

ಇದರಿಂದ ಕಲಿಯಬಹುದಾದ ಪಾಠ– ಸಂದರ್ಭೋಚಿತವಲ್ಲದ ವಿಷಯವಸ್ತುವನ್ನು ಅದೆಷ್ಟೇ ಅದ್ಭುತವಾಗಿ ಪ್ಯಾಕೇಜ್ ಮಾಡಿದರೂ ಅದು ಆಕರ್ಷಕವಾಗಿರಲಾರದು. ಆದರೆ ವಿದ್ಯಾರ್ಥಿಗಳ ಶ್ರದ್ಧೆ, ಪರಿಶ್ರಮ, ಶಿಸ್ತುಬದ್ಧ ತಾಲೀಮು ಇವೆಲ್ಲವೂ ಸ್ಪಷ್ಟವಾಗಿ ಎದ್ದು ಕಾಣುತಿತ್ತು. ವಸ್ತ್ರ ವಿನ್ಯಾಸದಲ್ಲಿ ಸಣ್ಣ ಸಣ್ಣ ವಿಷಯಗಳಿಗೆ ಕೊಟ್ಟ ಪ್ರಾಮುಖ್ಯತೆ, ಸಹಾಯಕ ಪಾತ್ರದಲ್ಲಿಯೂ ಶ್ರದ್ಧೆಯ ಅಭಿನಯ (ವಿಷ್ಣು, ಬಾಬುಲಾಲ್) ಮತ್ತು ಇಡೀ ನಾಟಕದ ಒಟ್ಟಾರೆ ವಿನ್ಯಾಸ ಗಮನ ಸೆಳೆದವು.

ದೇವರುಗಳಿವೆ ಎಚ್ಚರಿಕೆ!

ದೇವರು ಧರ್ಮಗಳ ಬಗ್ಗೆ ತಿಳಿ ಹೇಳುವ ವಿಚಾರವಂತಿಕೆಯನ್ನು ಹಾಸ್ಯದ ಮೂಲಕ ರಂಗದ ಮೇಲೆ ತರುವ ಒಂದು ಪ್ರಯತ್ನ ಇದಾಗಿದೆ. ಗೀಯಾ ಗೀತೆಯ ಮಾದರಿಯಲ್ಲಿ ನಾಟಕದ ವಸ್ತುವನ್ನು ಬಿಂಬಿಸುವ ರಂಗಗೀತೆಯಿಂದ ನಾಟಕ ಆರಂಭವಾಗುತ್ತದೆ. ರಂಗಮಂದಿರದ ಮುಖ್ಯ ದ್ವಾರದಿಂದ ಪ್ರವೇಶಿಸುವ ಸೂತ್ರಧಾರದ ತಂಡ ರಂಗವನ್ನೇರಿ 'ದೇವರು ಎಲ್ಲಿದ್ದಾನೆ, ನಮ್ಮನ್ನು ನಾವು ವಿಡಂಬಿಸಿಕೊಳ್ಳುವ, ನಮ್ಮನ್ನು ನಾವು ಗೇಲಿ ಮಾಡಿಕೊಳ್ಳುವ ಅದರೆ ವಿಚಾರಪೂರ್ಣ ನಾಟಕವಿದು. 'ಎಂದು ಮೊದಲೇ ಸ್ಪಷ್ಟೀಕರಣ ನೀಡುತ್ತಾರೆ.

ಕುಖ್ಯಾತಿಗೆ ಒಳಗಾಗಿರುವ ನಿತ್ಯಾನಂದ ಸ್ವಾಮಿಜಿ ಪಾತ್ರವನ್ನು ಪ್ಯಾರಡಿ ಮಾಡುವುದರ ಮೂಲಕ ಇಂತಹ ಕಳ್ಳಸ್ವಾಮಿಗಳ ವೇಷ ಬಯಲು ಮಾಡಿ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ವಿಚಾರವಂತ ತಂಡವೊಂದು ಕಾರ್ಯಾರೂಪಕ್ಕೆ ಇಳಿದಾಗ ಉಂಟಾಗುವ ಘರ್ಷಣೆ, ಲಾಠಿಚಾರ್ಜು, ಮಾಧ್ಯಮದ ವರದಿಗಳು ಹೀಗೆ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಆಗಾಗ ನಡೆಯುವ ಸಂಘರ್ಷಗಳನ್ನು ಲೇವಡಿ ಮಾಡುತ್ತಾ ಇದ್ದಕ್ಕಿದ್ದಂತೆ ಪರಲೋಕದಲ್ಲಿ ದೇವರುಗಳು ಸಭೆ ಸೇರಿ ತಮ್ಮ ತಮ್ಮ ಹೆಸರುಗಳಲ್ಲಿ ಭೂಲೋಕದಲ್ಲಿ ನಡೆಯುತ್ತಿರುವ ಶೋಷಣೆ, ಮೋಸ, ವಂಚನೆಗಳ ಬಗ್ಗೆ ಚರ್ಚೆ ಮಾಡುವ ಹಾಸ್ಯ ಸನ್ನಿವೇಶಗಳನ್ನು ಒಳಗೊಂಡ ನಾಟಕ. ನಟರ ಅಭಿನಯಕ್ಕಿಂತ ಹೇಳಿಕೆಗಳೇ ಹೆಚ್ಚಾಗಿ ನಾಟಕ ಸೊರಗುತ್ತದೆ. ರಂಗ ಸಜ್ಜಿಕೆ ಅನ್ನುವುದು ಈ ನಾಟಕದಲ್ಲಿ ಶೂನ್ಯ.

ಟೋಲ್ಕುಗಟ್ಟಿ ಅಥವಾ ಮಕ್ಕಳಿಸ್ಕೂಲ್ ಮನೇಲಲ್ಲವೇ..?

ಕೈಲಾಸಂ ಅವರದ್ದು ಸಾಮಾಜಿಕ ನಾಟಕಗಳೇ ಆದರೂ ಅವರ ವಿಶಿಷ್ಟ ಶೈಲಿ ಪ್ರತಿ ನಾಟಕದಲ್ಲಿಯೂ ಕಂಡುಬರುತ್ತದೆ. ಅದನು ಎತ್ತಿ ಹಿಡಿಯುವುದು, ಈ ನಾಟಕ ಮಾಡಿದ ಪ್ರತಿಯೊಬ್ಬರ ಜವಾಬ್ದಾರಿ ಕೂಡ ಆಗಿರುತ್ತದೆ. ಪ್ರಸ್ತುತ ಅಭಿನಯ ಮಾಡಿದ ತಂಡ, ಈ ನಾಟಕವನ್ನು ಇತರೆ ಸಾಮಾಜಿಕ ನಾಟಕಗಳಂತೆಯೇ ಒಂದು, ಎಂಬಂತೆ ಅರ್ಥಮಾಡಿಕೊಂಡಂತಿತ್ತು.

ನಾಟಕದ ಪ್ರಾರಂಭ ಅತ್ಯಂತ ಜಾಳು ಜಾಳಾಗಿ, ಪ್ರೇಕ್ಷಕರ ಉತ್ಸಾಹವನ್ನು ಕುಗ್ಗಿಸಿತ್ತು. ನಂತರ ಬಂದ ಪಾತ್ರಗಳು, ತಮ್ಮ ಪಾತ್ರವೇನೋ ಅಷ್ಟು ಮಾಡುವುದರಲ್ಲಿ ಗಮನವಿತ್ತೇ ಹೊರತು, ಇಡೀ ನಾಟಕ ಅಥವಾ ದೃಶ್ಯ ನೋಡುಗರ ಮೇಲೆ ಹೇಗೆ ಪರಿಣಾಮ ಬೀರುತ್ತದೆಎಮಬ ಅರಿವು ಇದ್ದಂತೆ ಇರಲಿಲ್ಲ.

ಕೈಲಾಸಂ ಅವರ ನಾಟಕಕ್ಕೆ ಮೇಳದ ಅವಶ್ಯಕತೆ ಇರುವುದಿಲ್ಲ. ಆದರೆ ಇಲ್ಲಿ ಬಲವಂತವಾಗಿ ಸಂಗೀತ ತಂಡವನ್ನು ಕೂರಿಸಿದಂತಿತ್ತು. ಮಾದ ಪಾತ್ರದ ಭೂಮಿಕಾ ಬಹಳ ಸಹಜ ನಟನೆಯಿಂದ ಜೀವತುಂಬಿದಳು. ಈ ನಾಟಕದ ಇನ್ನೊಂದು ವಿಶೇಷವೆಂದರೆ ಎಲ್ಲಾ ಪಾತ್ರಗಳನ್ನು ಹೆಣ್ಣು ಮಕ್ಕಳೇ ಮಾಡಿರುವುದು!

ಅಭಿನಯವನ್ನು ಸೇರಿ ಬಹಳ ಕಚ್ಚಾ ಅನ್ನಿಸಿದ್ದ ಈ ನಾಟಕಕ್ಕೆ, ಕೈಲಾಸಂ ಬಗ್ಗೆ ಅರಿತವರು ಮಾರ್ಗದರ್ಶನ ನೀಡಿದ್ದಲ್ಲಿ, ಒಂದು ಉತ್ತಮ ಮನರಂಜನಾಭರಿತಾ ನಾಟಕ ಆಗುವ ಸಾಧ್ಯತೆಗಳಿವೆ.

ನಾಟಕದ ತೀರ್ಪುಗಾರರ ಅನಿಸಿಕೆ

ABOUT THE DRAMA BY JURY MEMBERS

ನಾಯಿ ಕಥೆ

ಅತ್ಯಂತ ಸುಂದರವಾಗಿ ಹಾಗು ಪ್ರಭಾವಕಾರಿಯಾಗಿ ಈ ನಾಟಕವನ್ನು ರಂಗ ರೂಪ ಮಾಡಲಾಗಿತ್ತು. ನಾಟಕದ ನಟರು ಅದರಲ್ಲೂ ನಾಟಕದ ಮುಖ್ಯ ಪಾತ್ರ ವಹಿಸಿದ್ದ ನಟಿ ತನ್ನ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ನಾಟಕದ ರಂಗ ಸಜ್ಜಿಕೆಯಲ್ಲಿ ಹಾಗು ರಂಗ ವಿನ್ಯಾಸದಲ್ಲಿ ಇನ್ನು ಹೆಚ್ಚು ಕ್ರಿಯಾಶೀಲ ಯೋಚನೆ ತರಬಹುದಾಗಿತ್ತು. ಮೇಳ ಬಹಳ ಸೊಗಸಗಿದ್ದು, ನಾಟಕಕ್ಕೆ ಹೊಸ ಆಯಾಮ ತಂದು ಕೊಟ್ಟಿದ್ರಲ್ಲಿ ಸಂಶಯವೇ ಇಲ್ಲಾ. ಈ ನಾಟಕ ನೋಡುಗರರನ್ನು ಅನೇಕ ಭಾವನೆಗಳನ್ನು ಉಂಟು ಮಾಡಿತ್ತು ಅಂದರೆ ತಪ್ಪಾಗಲಾರದು.

ಸೇವಂತಿ ಪ್ರಸಂಗ

ರಂಗ ವಿನ್ಯಾಸ ಚೆನ್ನಾಗಿದ್ದರೂ ನಾಟಕದ ರಂಗ ಸಜ್ಜಿಕೆ ಹಾಗು ಪರಿಕರಗಳ ಅಂಶಕ್ಕೆ ಇನ್ನು ಹೆಚ್ಚಿನ ಗಮನ ಕೊಟ್ಟಿದ್ದಾರೆ ನಾಟಕ ಸಮಗ್ರವಾಗಿ ಮೂಡಿ ಬಂದಿರೋದು. ನಟರು ಅತ್ಯುತ್ತಮವಾಗಿ ಅಭಿನಯಿಸಿದ್ದರು, ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ದೊರಕಿಸಿದ್ದಾರೆ. ನಾಟಕದ ಪ್ರಸಾದನ ಸ್ವಲ್ಪ ಮಟ್ಟಿಗೆ ಸಪ್ಪೆ ಅನ್ನಿಸಿತ್ತು ಆದರೆ ಕಥೆ ಹೇಳೋ ಶೈಲಿಯಲ್ಲಿ ನಾಟಕ ತುಂಬಾ ಯಶಸ್ವಿಯಾಗಿ ಮೂಡಿ ಬಂದಿದೆ. ಬೆಳಕಿನ ವಿನ್ಯಾಸ ತಕ್ಕ ಮಾತಿಗೆ ಚೆನ್ನಾಗಿತ್ತು, ಮೇಳಕ್ಕೆ ಸ್ವಲ್ಪ ಹೆಚ್ಚು ತಾಲೀಮು ಬೇಕಾಗಿತ್ತು, ಒಟ್ಟಿನಲ್ಲಿ ನಾಟಕ ಒಂದು ಒಳ್ಳೆಯ ಕಥೆಯನ್ನು ಮನ ಮುಟ್ಟುವಂತೆ ಪ್ರಸ್ತುತವಾಗಿದೆ.



ಪಾಲ್ ಸುದರ್ಶನ್



ರಾಜಶ್ರೀ



ಅಭಿಷೇಕ್ ಅಯ್ಯಂಗಾರ್

ಸಾಂಸ್ಕೃತಿಕ ಸ್ಪರ್ಧೆಯ ವಿಜೇತರು

CULTURAL COMPETITION WINNERS

ಏಕಪಾತ್ರಾಭಿನಯ	ಚನ್ನವೀರಮ್ಮ ಗಂಗಣ್ಣ ಏಕಪಾತ್ರಾಭಿನಯ ಪಾರಿತೋಷಕ	ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)
ವಚನ ಗಾಯನ	ಶ್ರೀಮತಿ ಸರ್ವಮಂಗಳ ಸಿ. ಸೋಮಶೇಖರ ವಚನ ಗಾಯನ ಪಾರಿತೋಷಕ	ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ
ಪ್ರಬಂಧ	ಪ್ರೋ. ಶ್ರೀ ಕೆ. ರಂ. ನಾಗರಾಜ್ ಪ್ರಬಂಧ ಪಾರಿತೋಷಕ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಚರ್ಚಾಸ್ಪರ್ಧೆ	ಬಿ. ಕೆ. ಲೋಕಪ್ಪಗೌಡ ಚರ್ಚಾಸ್ಪರ್ಧೆ ಪಾರಿತೋಷಕ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ
ನಾಟಕ ವಿಮರ್ಶೆ	ಅತ್ಯುತ್ತಮ ನಾಟಕ ವಿಮರ್ಶೆ ಪಿ. ಲಂಕೇಶ್ ಪ್ರಶಸ್ತಿ	ಧನ್ವಂತರಿ ಅಕಾಡೆಮಿ ಫಾರ್ ಮ್ಯಾನೇಜ್ಮೆಂಟ್
ಭಾರತೀಯ ಶಾಸ್ತ್ರೀಯ ನೃತ್ಯ ಜಾನಪದ ನೃತ್ಯ	ಪದ್ಮಭೂಷಣ ವೆಂಕಟಲಕ್ಷ್ಮಮ್ಮ ನೃತ್ಯ ಪಾರಿತೋಷಕ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಶಾಸ್ತ್ರೀಯ ಗಾಯನ ಸುಗಮ ಸಂಗೀತ ಗಾಯನ ಭಾರತೀಯ ಶಾಸ್ತ್ರೀಯ ವಾದ್ಯ – ಲಯ ಭಾರತೀಯ ಶಾಸ್ತ್ರೀಯ ವಾದ್ಯ – ಸ್ವರ ದೇಶಭಕ್ತಿ ಗೀತೆ ವೃಂದಗಾಯನ ಜಾನಪದ ವೃಂದಗಾಯನ	ಜಿ. ವಿ. ಅತ್ರಿ ಸಂಗೀತ ಸ್ಪರ್ಧೆಗಳ ಪಾರಿತೋಷಕ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಮೂಕಾಭಿನಯ	ಕನ್ನಲಿ ಮಹಾದೇವಯ್ಯ ಮೂಕಾಭಿನಯ ಪಾರಿತೋಷಕ	ನ್ಯಾಷನಲ್ ಕಾಲೇಜು ಸ್ವಾಯತ್ತ, ಬಸವನಗುಡಿ
ರಂಗಗೀತೆ ದೃಶ್ಯಾವಳಿ	ಸಂಚಯ ಜಿ. ಎಸ್. ರಾಮರಾವ್ ರಂಗಗೀತೆ ದೃಶ್ಯಾವಳಿ ಪಾರಿತೋಷಕ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು

ನಾಟಕದ ಅತ್ಯುತ್ತಮ ಪ್ರಶಸ್ತಿ ವಿಜೇತರು

BEST AWARD WINNERS IN DRAMA

ಅತ್ಯುತ್ತಮ ರಂಗಸಜ್ಜಿಕೆ ಶಶಿಧರ್ ಅಡಪ ಪ್ರಶಸ್ತಿ	ದಯಾನಂದ ಸಾಗರ್ ವಿದ್ಯಾ ಸಂಸ್ಥೆ
ಅತ್ಯುತ್ತಮ ರಂಗಪರಿಕರ ಕೃಷ್ಣಮೂರ್ತಿ ಕವತ್ತಾರ್ ಪ್ರಶಸ್ತಿ	ಧನ್ವಂತರಿ ಅಕಾಡೆಮಿ ಫಾರ್ ಮ್ಯಾನೇಜ್ಮೆಂಟ್
ಅತ್ಯುತ್ತಮ ಪ್ರಸಾದನ ಗ್ರೀನ್ ರೂಮ್ ನಾಣಿ ಪ್ರಶಸ್ತಿ	ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)
ಅತ್ಯುತ್ತಮ ವಸ್ತ್ರ ವಿನ್ಯಾಸ ಪ್ರಮೋದ್ ಶಿಗ್ಗಾಂವ್ ಪ್ರಶಸ್ತಿ	ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)
ಅತ್ಯುತ್ತಮ ಬೆಳಕು ವಿ. ರಾಮಮೂರ್ತಿ ಪ್ರಶಸ್ತಿ	ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಅತ್ಯುತ್ತಮ ಸಂಗೀತ ಬಿ. ವಿ. ಕಾರಂತ್ ಪ್ರಶಸ್ತಿ	ಎಸ್ ಜೆ ಬಿ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್
ಅತ್ಯುತ್ತಮ ರಂಗ ವಿನ್ಯಾಸ ಮೊಹಮ್ಮದ್ ಮುಸ್ತಫ ಪ್ರಶಸ್ತಿ	ದಿ. ನ್ಯಾಷನಲ್ ಕಾಲೇಜ್, ಜಯನಗರ
ಅತ್ಯುತ್ತಮ ನಿರ್ದೇಶನ ಪ್ರಸನ್ನ ಹೆಗ್ಗೋಡು ಪ್ರಶಸ್ತಿ	ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಅತ್ಯುತ್ತಮ ಪೋಸ್ಟರ್ (ಭಿತ್ತಿಪತ್ರ) ಆರ್. ಎಮ್. ಹಡಪದ್ ಪ್ರಶಸ್ತಿ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಅತ್ಯುತ್ತಮ ಪ್ರಚಾರ ಕಲೆ ರಂಗಸೌರಭ ಪ್ರಶಸ್ತಿ	ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)
ಅತ್ಯುತ್ತಮ ಪೋಷಕ ನಟಿ ಗಿರಿಜಾ ಲೋಕೇಶ್ ಪ್ರಶಸ್ತಿ	ದಿ. ನ್ಯಾಷನಲ್ ಕಾಲೇಜ್, ಜಯನಗರ
ಅತ್ಯುತ್ತಮ ಪೋಷಕ ನಟ ಅಚ್ಯುತ್ ಕುಮಾರ್ ಪ್ರಶಸ್ತಿ	ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಅತ್ಯುತ್ತಮ ನಟಿ ಉಮಾಶ್ರೀ ಪ್ರಶಸ್ತಿ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ತಾಲೂಕು, ತುಮಕೂರು ಜಿಲ್ಲೆ
ಅತ್ಯುತ್ತಮ ನಟ ಡಾ. ರಾಜ್ ಕುಮಾರ್ ಪ್ರಶಸ್ತಿ	ನಾಗಾರ್ಜುನ ಪದವಿ ಕಾಲೇಜು

ನಾಟಕದ ಪಾರಿತೋಷಕ ವಿಜೇತರು

DRAMA AWARD WINNERS

ಕನ್ನಲಿ ರುದ್ರಮ್ಮ ವಿರೂಪಾಕ್ಷಯ್ಯ ಹೊರ ಜಿಲ್ಲಾ ನಾಟಕ ಪಾರಿತೋಷಕ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ತಾಲೂಕು, ತುಮಕೂರು ಜಿಲ್ಲೆ
ಸ್ನೇಹಸಮೂಹ ರಂಗಶಿಸ್ತು ಪಾರಿತೋಷಕ	ಕ್ರೈಸ್ಟ್ (ಡಿಮ್ಡ್ ಟು ಬಿ ಯುನಿವರ್ಸಿಟಿ)
ಶಂಕರ್‌ನಾಗ್ ತೃತೀಯ ನಾಟಕ ಪಾರಿತೋಷಕ	ನಾಗಾರ್ಜುನ ಪದವಿ ಕಾಲೇಜು
ಪ್ರಯೋಗರಂಗ ದ್ವಿತೀಯ ನಾಟಕ ಪಾರಿತೋಷಕ	ದಿ ನ್ಯಾಷನಲ್ ಕಾಲೇಜ್, ಜಯನಗರ
ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅತ್ಯುತ್ತಮ ನಾಟಕ ಪಾರಿತೋಷಕ	ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಪದ್ಮಭೂಷಣ ಡಾ॥ ಹೆಚ್. ನರಸಿಂಹಯ್ಯ ತೃತೀಯ ಸರ್ವೋತ್ತಮ ಪಾರಿತೋಷಕ	ಶಿವಾನಂದ ಶರ್ಮಾ ಮೆಮೋರಿಯಲ್ ಆರ್. ವಿ. ಕಾಲೇಜು – S. S. M. R. V.
ಉಮೇಶ್ ರುದ್ರ ಸರ್ವೋತ್ತಮ ದ್ವಿತೀಯ ಪಾರಿತೋಷಕ	ನಾಗಾರ್ಜುನ ಪದವಿ ಕಾಲೇಜು
ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ	ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು



ಕ್ಷಣಗಳು

MOMENTS





























ಪ್ರಾಯೋಜಕರು

SPONSORS

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

Rishab Shetty FILMS

GOLDEN HORSE CINEMA



ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ









ಶಿರಭ

2023

convenor@rangasourabha.com

www.rangasourabha.com

ADDRESS

"SHIVA", 516, 8th Cross
Jayanagar 7th Block West
Bengaluru - 560082
Mobile: +91 - 94488 04334